ಅಧ್ಯಕ್ಷರು:– ಎ.ಪಿ.ಎಂ.ಸಿ. ಬಿಲ್ ಬಗ್ಗೆ ವಿವರಿಸಿ ಮಾನ್ಯ ಸಚಿವರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಆಧ್ಯಕ್ಷರೆ, ಮೊದಲು ಬಜೆಟ್ ಮೇಲಿನ ಚರ್ಚೆ ಮುಗಿದುಹೋಗಲಿ.

ಅಧ್ಯಕ್ಷರು:– ಒಂದೈದು ನಿಮಿಷದಲ್ಲಿ ಬಿಲ್ ಬಗ್ಗೆ ವಿವರಿಸಿ ಮುಗಿಸುತ್ತಾರೆ. ಇದು ಪಾಸ್ ಆದ ಮೇಲೆ ಬಜೆಟ್ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ.

5. ಶಾಸನ ರಚನೆ

ಅ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರಗಳು(ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ

ವಿಧೇಯಕ 2014

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, 2014 ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾಗಳು (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. "2014 ನೇ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರಗಳು (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ"

ಪ್ರಸ್ತಾವದ ಪರವಾಗಿರುವವರು 'ಹೌದು' ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು 'ಇಲ್ಲ' ಎಂದು ಸೂಚಿಸಬೇಕು

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು ಅನುಮೋದನೆ ದೊರಕಿದೆ

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ರೈತರು ಬೆಳೆದಂಥ ಹಣ್ಣು ಮತ್ತು ತರಕಾರಿಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವುದಕ್ಕೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಗ್ರಾಹಕರ ಮಾರಾಟ ಅಂಗಳ ಎನ್ನತಕ್ಕಂಥದ್ದನ್ನು ಸ್ಥಾಪಿಸುವುದರ ಬಗ್ಗೆ ಸರ್ಕಾರ ತೀರ್ಮಾನ ಮಾಡಿದೆ. ಈ ದಿಸೆಯಲ್ಲಿ ಒಂದು ತಿದ್ದುಪಡಿಯನ್ನು ತರಲಾಗಿದೆ. ತಿದ್ದುಪಡಿಯ ಪ್ರಕಾರ ನಾವು ಈಗಾಗಲೇ ಸೆಕ್ಷನ್ 63 ರಲ್ಲಿ ಉತ್ಪಾದಕರಿಗೆ ಸಂಸ್ಕರಣೆ ಮಾಡಬೇಕಾದ ಸಂದರ್ಭ ಬಂದಾಗ ಅವರಿಗೆ ಸ್ಪಷ್ಟವಾಗಿ ಜಾಗವನ್ನು ಕೊಡುವುದಕ್ಕೋಸ್ಕರ, ಅಡಕ ಮಾಡುವುದಕ್ಕೋಸ್ಕರ ಇವತ್ತು ತಂದಿರತಕ್ಕಂಥ ಒಂದು ಸಣ್ಣ ತಿದ್ದುಪಡಿ. ಏಕೆ ಈ ತಿದ್ದುಪಡಿ ಎಂದರೆ ಈ ಮಾರುಕಟ್ಟೆ ಕಾಯಿದೆಯಲ್ಲಿ ಯಾವತ್ತೂ ಕೂಡ ದಳ್ಳಾಳಿಗಳ ಮುಖೇನ ಮಾರಾಟ ಮಾಡುವುದಕ್ಕೆ ಅವಕಾಶ ಇರತಕ್ಕಂಥದ್ದು. ಅದೇ ರೀತಿ ರೈತರು ತಮ್ಮ ಉತ್ಪನ್ನಗಳನ್ನು ನೇರವಾಗಿ ಖರೀದಿದಾರರಿಗೆ ಮಾರಾಟ ಮಾಡುವುದಕ್ಕೆ ಅವಕಾಶವಿದೆ. ಆದರೆ ರೈತರು ನೇರವಾಗಿ ಗ್ರಾಹಕರಿಗೆ ಮಾರುಕಟ್ಟೆ ಪ್ರಾಂಗಣದಲ್ಲಿ ಮಾರಾಟ ಮಾಡಲು ಅವಕಾಶವಿರುವುದಿಲ್ಲ. ಆ ಅವಕಾಶವನ್ನು ಪ್ರಸ್ತುತ ಮಾರುಕಟ್ಟೆ ಬಿಲ್‌ಗೆ

ತಿದ್ದುಪಡಿಯನ್ನು ತಂದು ಅದಕ್ಕೆ ಅವಕಾಶವನ್ನು ಕೊಡುವುದಕ್ಕೆ ಸರ್ಕಾರ ತೀರ್ಮಾನ ಮಾಡಿದೆ. ಈ ರೀತಿ ಮಾಡಿದರೆ ರೈತರು ತಮ್ಮ ಉತ್ಪನ್ನವನ್ನು ಮಾರಾಟ ಮಾಡಲು ಅವಕಾಶವನ್ನು ಕೊಟ್ಟಂತಾಗುತ್ತದೆ. ರೈತರು ಬೆಳದಿದ್ದನ್ನು ಮೂರನೆಯವರಿಗೆ ಮಾರಾಟ ಮಾಡುವುದಿಲ್ಲ. ರೈತರೇ ನೇರವಾಗಿ ಗ್ರಾಹಕರಿಗೆ ಕೊಡುವುದಕ್ಕೆ ಅವಕಾಶವಾಗುತ್ತದೆ. ಹೀಗಾಗಿ ಮಧ್ಯವರ್ತಿಗಳನ್ನು ತಪ್ಪಿಸಬೇಕು ಎನ್ನುವ ಕಾರಣಕ್ಕೋಸ್ಕರ, ಗುಣಮಟ್ಟವನ್ನು ಕೂಡ ಕಾಪಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ದೃಷ್ಟಿಯಿಂದ ರೈತರ ಹಿತದೃಷ್ಟಿಯನ್ನಿಟ್ಟುಕೊಂಡು ಈ ತಿದ್ದುಪಡಿಯನ್ನು ತಂದಿದೆ. ಇದು ಕೇವಲ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್‌ನಲ್ಲಿ ರೈತರು ತಮ್ಮ ತರಕಾರಿಗಳನ್ನು ಹಣ್ಣು ಹಂಪಲುಗಳನ್ನು perishable item ಗಳನ್ನು ಮಾರಾಟ ಮಾಡುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡತಕ್ಕಂಥದ್ದನ್ನು ಕಾಯಿದೆಯಲ್ಲಿ ಅಡಕ ಮಾಡತಕ್ಕಂಥದ್ದೇ ಮುಖ್ಯವಾಗಿರತಕ್ಕಂಥ ಉದ್ದೇಶವಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಸಿರ್ಸಿ):– ಮಾನ್ಯ ಅಧ್ಯಕ್ಷರೆ, ನೀವು ತಂದಿರುವ ಬಿಲ್‌ನಲ್ಲಿ ಒಂದು ಭಾಗವೇನಿದೆ ಅದರ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ಈ ಎ.ಪಿ.ಎಂ.ಸಿ. ವ್ಯವಸ್ಥೆಯೇನಿದೆ ಇದು ಅತ್ಯಂತ ಕೇಂದ್ರೀಕೃತವಾದಂಥ ವ್ಯವಸ್ಥೆಯಾಗಿದೆ. ಬ್ರಿಟಿಷರು ಬಿಟ್ಟುಹೋದಂಥ ವ್ಯವಸ್ಥೆಯಲ್ಲಿ ಯಾವುದಾದರೂ ಇದೆಯೆಂದರೆ ಅದು ಎ.ಪಿ.ಎಂ.ಸಿ. ವ್ಯವಸ್ಥೆ. ಈಗ ಎ.ಪಿ.ಎಂ.ಸಿ. ಯೊಳಗೆ ಯಾವುದಾದರೂ ಒಂದು ಕೆಲಸಕ್ಕೆ ಅನುಮತಿ ತೆಗೆದುಕೊಳ್ಳಬೇಕೆಂದರೆ ಇಲ್ಲಿ ಬೆಂಗಳೂರಿಗೆ ಬಂದು ಎಷ್ಟು ಸಲ ಅಡ್ಡಾಡಿ ಹೋಗಬೇಕು ಎಂದು ಎ.ಪಿ.ಎಂ.ಸಿ. ಯವರನ್ನು ನಾವು ಕೇಳಬೇಕು.

ಅಧ್ಯಕ್ಷರು:– ಅದು Elected Body ಆಗಿದೆಯಲ್ಲ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– Elected Body ಇದೆ. ಆದರೆ ಅದಕ್ಕೆ ಅಧಿಕಾರವೇನಿಲ್ಲ. ಅಧಿಕಾರವೆಲ್ಲವೂ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದೆ. ಈಗ ಎ.ಪಿ.ಎಂ.ಸಿ. ಕಾಯಿದೆಗಳಲ್ಲಿ ಎರಡ್ಮೂರು ಸಾರಿ ತಿದ್ದುಪಡಿಗಳನ್ನು ತಂದು ತಂದು ಕನ್‌ಫ್ಯೂಸ್ ಮಾಡಿ ಈಗ ಎಲ್ಲವನ್ನೂ ಕೇಂದ್ರೀಕೃತ

ಮಾಡಿಟ್ಟಿದ್ದಾರೆ. ನೀವು 50 ಸಾವಿರ, 1 ಲಕ್ಷ ರೂ.ಗಳ ಕೆಲಸ ಮಾಡಿಸುವುದಕ್ಕೂ ಸಹ ಅಲ್ಲಿ Elected Body ಗೇ ಅಧಿಕಾರವಿಲ್ಲ. ಎಲ್ಲವೂ ಕೇಂದ್ರೀಕೃತವಾಗಿದೆ. ಎಲ್ಲ ಫೈಲ್‌ಗಳು ಬೆಂಗಳೂರಿಗೆ ಬರಬೇಕು. ಬೆಂಗಳೂರಿಗೆ ಬಂದರೆ ಇಲ್ಲಿ ಯಾರ ಯಾರ ಟೇಬಲ್‌ಗೆ ಎಷ್ಟೆಷ್ಟು ಸಲ ಭೇಟಿ ಮಾಡಬೇಕೆಂದು ನಮಗೂ ನಿಮಗೂ ಗೊತ್ತಿರುವ ವ್ಯವಸ್ಥೆ. ಈಗ ಲುಕ್ಸಾನ್‌ನಲ್ಲಿರುವಂಥ ಎ.ಪಿ.ಎಂ.ಸಿ. ಗಳೇ ಜಾಸ್ತಿ ಇವೆ. ಹಾನಿಯನ್ನು ಅನುಭವಿಸುತ್ತಿರುವಂಥ ಎ.ಪಿ.ಎಂ.ಸಿ. ಗಳೇ ರಾಜ್ಯದಲ್ಲಿ ಜಾಸ್ತಿ ಇವೆ. ಆದರೆ ಇವತ್ತು ಲಾಭದಲ್ಲಿರುವಂಥ ಎ.ಪಿ.ಎಂ.ಸಿ. ಯವರು ಸಹ ಇವತ್ತಿನ ಕೇಂದ್ರೀಕೃತ ವ್ಯವಸ್ಥೆಯಿಂದಾಗಿ ಎ.ಪಿ.ಎಂ.ಸಿ. ವ್ಯವಸ್ಥೆಯೇ ಶಿಥಿಲಗೊಂಡಿದೆ. ಜನರಿಗೆ ಈ ಬಗ್ಗೆ ಬೇಸರ ಬಂದಿದೆ. ಈ ಬಿಲ್‌ನಲ್ಲಿ ಮಾರುಕಟ್ಟೆಯಲ್ಲಿ ರೈತರಿಗೆ ಸ್ಥಳವನ್ನು ಕೊಟ್ಟು ನೇರವಾಗಿ ಅವರ ಉತ್ಪನ್ನಗಳನ್ನು ಗ್ರಾಹಕರಿಗೆ ಮಾರಾಟ ಮಾಡಲು ಅವಕಾಶವನ್ನು ಮಾಡಿಕೊಡುತ್ತೀರಿ. ಅಲ್ಲಿಯ ರೈತ ತಾನು ಬೆಳೆದ ತರಕಾರಿಗಳನ್ನೋ, ಹಣ್ಣು ಹಂಪಲುಗಳನ್ನೋ ಅಥವಾ ಇತರ ಕೃಷಿ ಉತ್ಪನ್ನಗಳನ್ನೋ ಮಾರಾಟ ಮಾಡಲು ಸ್ವಲ್ಪ ಜಾಗ ಕೊಡಿ ಎಂದು ಅಲ್ಲಿಗೆ ಬರುತ್ತಾನೆ. ಆಗ ಅಲ್ಲಿರುವವರು ಈ ರೈತನಿಗೆ ಜಾಗ ಕೊಡಲು ಪರ್ಮಿಷನ್‌ಗಾಗಿ ಬೆಂಗಳೂರಿಗೆ ಬರೆಯಬೇಕಾಗುತ್ತದೆ. ಬೆಂಗಳೂರಿನಿಂದ ಪರ್ಮಿಷನ್ ಬರುವ ತನಕ ಆ ರೈತನ ಉತ್ಪನ್ನವಾದ ಹಣ್ಣೆಲ್ಲವೂ ಕೊಳೆತು ಅಲ್ಲೇನಾಗಬೇಕೋ ಅದೆಲ್ಲವೂ ಆಗಿಹೋಗಿರುತ್ತದೆ. ಇವರು ಇಷ್ಟೊಂದು ಕೇಂದ್ರೀಕೃತ ವ್ಯವಸ್ಥೆಯನ್ನಿಟ್ಟುಕೊಂಡು ನಾವೇನೋ ಬಜೆಟ್‌ನಲ್ಲಿ ಹೇಳಿದ್ದೇವೆ, ಅದಕ್ಕೆ ಅನ್ವಯವಾಗಿ ಈ ರೀತಿ ಒಂದೇನೋ ತಿದ್ದುಪಡಿಯನ್ನು ತರುತ್ತಿದ್ದೇವೆ ಎಂದು ಹೇಳುವುದು ಮೇಲ್ನೋಟಕ್ಕೆ ಆಗುವ ಬದಲಾವಣೆಯೇ ಹೊರತು ಆಂತರಿಕವಾಗಿ ಬದಲಾವಣೆ ಆಗುವುದಿಲ್ಲ. ನೀವು ಈಗ ಹೇಳಿ ಆ ರೈತರಿಗೆ ಯಾರು ಪರ್ಮಿಷನ್ ಅನ್ನು ಎ.ಪಿ.ಎಂ.ಸಿ. ಯಲ್ಲಿ ಕೊಡುತ್ತಾರೆ. ಎ.ಪಿ.ಎಂ.ಸಿ. ಯೊಳಗೆ ನಿಮ್ಮ ಸೆಕ್ರೆಟರಿಗಳೇ ಇಲ್ಲ. ಅಲ್ಲಿಯ ಪರಿಸ್ಥಿತಿಗಳನ್ನು ಇವತ್ತು ನಾವು ಹೇಳಬಾರದು, ಅಂಥ ಸ್ಥಿತಿಯಿದೆ. ರೈತನೊಬ್ಬ ಬೆಳೆದ ಹಣ್ಣು ತರಕಾರಿಗಳನ್ನೋ ಅಥವಾ ಬೆಳದೆ ಯಾವುದೋ ಉತ್ಪನ್ನವನ್ನು ಮಾರಾಟ

ಮಾಡಲು ತೆಗೆದುಕೊಂಡು ಬರುತ್ತಾನೆ. ಅವನಿಗೆ ಆ ಕ್ಷಣದಲ್ಲಿಯೇ ಅದನ್ನು ಮಾರಾಟ ಮಾಡಲು ಅನುಮತಿ ಕೊಡಬೇಕಲ್ಲ? ಈಗ ಐದರಿಂದ ಆರು ಎ.ಪಿ.ಎಂ.ಸಿ. ಗಳಿಗೆ ಒಬ್ಬ ಸೆಕ್ರೆಟರಿ ಮಾತ್ರ ಇರುವುದು. ಈಗ ಅವನನ್ನು ಏನು ಕೇಳಿದರೂ ಅವನು ಬೆಂಗಳೂರಿನಲ್ಲಿ ಹೋಗಿ ಕೇಳಬೇಕು ಎನ್ನುವ ಸ್ಥಿತಿಯಿದೆ. ಅವನು District Headquarters ಎಂದು ಹೇಳುವುದಿಲ್ಲ. ಆ ಸೆಕ್ರೆಟರಿಯವರನ್ನು ನೀವು ಮಾಡನಾಡಿಸಿದರೆ District Headquarters ನಲ್ಲಿರುವವರನ್ನು ಕೇಳಿ ಹೇಳುತ್ತೇನೆಂದು ಹೇಳುವುದಿಲ್ಲ. ಏಕದಂ ಬೆಂಗಳೂರಿನಲ್ಲಿರುವ ಡೈರೆಕ್ಟರ್‌ರವರನ್ನು ಕೇಳಬೇಕೆಂದು ಹೇಳುತ್ತಾನೆ. ಹೀಗಾದರೆ ಈ ನಮೂನೆ ವ್ಯವಸ್ಥೆಯಿಂದ ರೈತನಿಗೆ ಏನು ಉಪಯೋಗ? ಈ ನಮೂನೆ ವ್ಯವಸ್ಥೆಯನ್ನು ನೀವು ಜಟಿಲಗೊಳಿಸಿಕೊಂಡಿದ್ದರೆ ರೈತನಿಗೆ ಏನು ಅನುಕೂಲವಾಗುತ್ತದೆ? ಅವನು ಮಾರುವ ಜಾಗಕ್ಕೆ ಮೊದಲು ಅನುಮತಿ ಕೊಡಬೇಕು. ಎರಡನೆಯದಾಗಿ ಬಾಡಿಗೆ ಎಷ್ಟು ಎಂಬುದನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು:– De-centralise ಮಾಡುವುದಕ್ಕೆ ಏನಾದರೂ examine ಮಾಡಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಒಂದೊಂದು ಎ.ಪಿ.ಎಂ.ಸಿ. ಯವರು ಬಾಡಿಗೆ ಎಂದು ಒಂದೊಂದು ಬೆಲೆ ನಿಗದಿ ಮಾಡಿ ರೈತರಿಗೆ ಶೋಷಣೆ ಮಾಡುವುದಕ್ಕೆ ಇನ್ನೊಂದು ಮಾರ್ಗ ಕೊಟ್ಟಂತಾಗುತ್ತದೆ. ನೀವು ಇದರೊಳಗೆ ಅನುಮತಿ ಕೊಡುವವರು ಯಾರು ಮತ್ತು ಬಾಡಿಗೆ ನಿಗದಿ ಮಾಡುವವರು ಯಾರು? ಅವರೆಷ್ಟೋ ಬಾಡಿಗೆ ಹೇಳುತ್ತಾರೆ. ಆ ಬಾಡಿಗೆ ಎಷ್ಟು ಎಂದು ನಿಖರವಾಗಿ ಹೇಳಬೇಕಲ್ಲ? ಒಂದೊಂದು ಎ.ಪಿ.ಎಂ.ಸಿ. ಯವರು ಒಂದೊಂದು ರೀತಿಯ ಬಾಡಿಗೆಯನ್ನು ಹಾಕಿ ರೈತರಿಗೆ ಮತ್ತೊಂದು ರೀತಿಯಲ್ಲಿ ಶೋಷಣೆ ಮಾಡುತ್ತಾರೆ. ನೀವು ಮೇಲ್ನೋಟಕ್ಕೆ ರೈತರಿಗೆ ಮಾರಾಟ ಮಾಡುವುದಕ್ಕೆ ಸ್ಥಳ ಕೊಡುವುದು ಮತ್ತು ಅದಕ್ಕೆ ಅನುಮತಿ ಕೊಡುವುದು ಎಂದು ಅನ್ನಿಸುತ್ತದೆ. ಆದರೆ ಇದು ರೈತರನ್ನು ಪರೋಕ್ಷವಾಗಿ ಆ ವ್ಯವಸ್ಥೆಯಲ್ಲಿ ಸಿಕ್ಕಿಹಾಕಿಸಿ ಅವರಿಗೆ ಇನ್ನಷ್ಟು ಹೆಚ್ಚು harass ಮಾಡುವಂಥ ಒಂದು ವ್ಯವಸ್ಥೆ ನಿರ್ಮಾಣವಾಗುತ್ತದೆ ಎನ್ನುವಂಥ ಭಾವನೆಯಿದೆ. ಹೀಗಾಗಿ

ಸರ್ಕಾರ ಮೇಲ್ನೋಟದ ಕೆಲವು ಸುಧಾರಣೆಗಳನ್ನು ತರುವುದಕ್ಕೆ ಮುಂದಾಗದೆ ಅಲ್ಲಿ APMC ಯಲ್ಲಿ Elected Body ಏನಿದೆ ಅದಕ್ಕೇ ಅಧಿಕಾರವನ್ನು ಕೊಟ್ಟು ಆ ವ್ಯವಸ್ಥೆಗೆ ಒಂದು ವಿಶ್ವಾಸ ಬರುವಂತೆ ಮಾಡಿ. ದಯವಿಟ್ಟು ನಾನು ಹೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಆ ಎ.ಪಿ.ಎಂ.ಸಿ. ಯವರು ಬೆಂಗಳೂರಿಗೆ ಅಲೆದಾಡುವುದನ್ನು ತಪ್ಪಿಸಿ. ಅದು ಇಲ್ಲವೆಂದರೆ ನಮ್ಮ ಯಾವ ರೈತರಿರೂ ಕೂಡ APMC ಬಗ್ಗೆ ವಿಶ್ವಾಸ ಬರುವುದಿಲ್ಲ. ಅಲ್ಲಿರುವಂತಹ APMC elected members ಏನಿದ್ದಾರೆ ಅವರಿಗೆ ಈ ವ್ಯವಸ್ಥೆ ಬಗ್ಗೆ ಜಿಗುಪ್ಸೆ ಬಂದು ಹೋಗಿದೆ. ಇವತ್ತು APMC ಎನ್ನುವುದು ಆ ರೀತಿಯ ಸ್ಥಿತಿಯಾಗಿದೆ. ಎಷ್ಟೋ ಪಾಲು ನಮ್ಮ ಗ್ರಾಮ ಪಂಚಾಯತಿಗಳು ಬೇಕು, ಈ ಎಪಿಎಂಸಿ ಬೇಡವೆನ್ನುವ ಪರಿಸ್ಥಿತಿಯಾಗಿದೆ. ಹಾಗಾಗಿ ಈ ರೀತಿ ಮೇಲ್ನೋಟಗಳ ಸುಧಾರಣೆಗೆ ತಾವು ಮುಂದಾಗದೆ, ಆಮೂಲಾಗ್ರವಾದ ಬದಲಾವಣೆಗಳನ್ನು ಮಾಡುವುದಕ್ಕೆ ಬೇಕಾದಂತಹ ಪ್ರಯತ್ನವನ್ನು ಮಾಡಬೇಕು. ಇದರಿಂದ ರೈತರಿಗೆ ಅನಾನುಕೂಲವೇ ಜಾಸ್ತಿಯಾಗಬಹುದು ಎಂದು ನನ್ನ ಭಾವನೆಯನ್ನು ತಿಳಿಸುತ್ತೇನೆ.

ಅಧ್ಯಕ್ಷರು:– ಸಿ.ಟಿ. ರವಿಯವರೆ, ಮಾತನಾಡಿ,

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ, ನಾನು ಎರಡು point ಹೇಳುತ್ತೇನೆ. ಒಂದು ವರ್ತಕರೇ ರೈತರ ಹೆಸರಿನಲ್ಲಿ ವ್ಯಾಪಾರ ಮಾಡುವಂತಹ ಸಾಧ್ಯತೆಗಳು ಇವೆ. ಅದನ್ನು ತಡೆಗಟ್ಟುವುದಕ್ಕೆ ಅಥವಾ ನಿಯಂತ್ರಣ ಮಾಡುವುದಕ್ಕೆ ಇದರಲ್ಲಿ ಏನು ಅವಕಾಶ ಮಾಡಿದ್ದೀರಿ? ನೀವು ರೈತರು ಎಂದು ಹೇಗೆ identify ಮಾಡುತ್ತೀರಿ? ನೀವು ಉತ್ಪಾದಕರಿಂದ ಗ್ರಾಹಕರಿಗೆ ನೇರವಾಗಿ ತಲುಪಿಸುವುದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಸದುದ್ದೇಶದಿಂದ ಮಾಡಿದ್ದೀರಿ. ನೀವು ರೈತರನ್ನು ಹೇಗೆ ಗುರುತಿಸುತ್ತೀರಿ? ರೈತರು ಎನ್ನುವುದಕ್ಕೆ ಅವರಿಗೆ ಕಾರ್ಡು ಕೊಡುತ್ತೀರಾ? ಅವರಿಗೆ ಏನು ತೆರಿಗೆ ಹಾಕುತ್ತೀರಿ? ಇದಕ್ಕೆ service tax, sales tax ಇದೆಯೇ? ನೀವು ಯಾವ ಆಧಾರದ ಮೇಲೆ ತೆರಿಗೆ ಹಾಕುತ್ತೀರಿ? ಇದರ ಬಗ್ಗೆ ಸ್ಪಷ್ಟತೆ ಇಲ್ಲ. ಇದನ್ನು ನಾನು ಏಕೆ ಹೇಳುತ್ತೇನೆಂದರೆ ವರ್ತಕರು organized sector, ರೈತರು

unorganized sector. ವರ್ತಕರು ರೈತರ ಹೆಸರಿನಲ್ಲಿ ವ್ಯಾಪಾರ ಮಾಡಿದರೆ, ಅದನ್ನು ನಿಯಂತ್ರಣ ಮಾಡುವುದಕ್ಕೆ ಈ ಆಕ್ಟ್‌ನಲ್ಲಿ ಏನು ಅವಕಾಶ ಮಾಡಿದ್ದೀರಿ?

ಶ್ರೀ ಕೆ.ಎನ್. ರಾಜಣ್ಣ (ಮಧುಗಿರಿ):– ಮಾನ್ಯ ಅಧ್ಯಕ್ಷರೆ, ಇದನ್ನು ಸದುದ್ದೇಶದಿಂದ ಮಾಡಿದ್ದಾರೆಂದು ಮೇಲ್ನೋಟಕ್ಕೆ ಇದ್ದರೂ ಕೂಡ ರೈತರು ನೇರವಾಗಿ ಗ್ರಾಹಕರಿಗೆ ವ್ಯಾಪಾರ ಮಾಡಲು ಅನುಕೂಲವಾಗಬೇಕೆನ್ನುವ ದೃಷ್ಟಿಯಿಂದ ತಂದಿರುವುದು ಎಂದು ಹೇಳಿದ್ದೀರಿ. ಆದರೆ ಸಂಸ್ಕರಣೆ ಎನ್ನುವ ಪದ ಸೇರಿರುವಂತಹ ಹಿನ್ನೆಲೆಯಲ್ಲಿ,.. ಈಗಾಗಲೇ ಎಲ್ಲರೂ ಮಾತನಾಡಿದ ಹಾಗೆ ಅವರಿಗೆ ಬೇಕಾದಂತಹ ನಿರ್ದಿಷ್ಟ ಜಾಗವನ್ನು ಅಲ್ಪಾವಧಿಗೆ ಕೊಡತಕ್ಕಂಥ ಮತ್ತು ದರ ನಿಗದಿ ಮಾಡುವುದಕ್ಕೆ ಅಧಿಕಾರ ಅಲ್ಲಿನ ಸಮಿತಿಗೆ ಇರಬೇಕೆನ್ನುವ ರೀತಿಯಲ್ಲಿ ನಿರ್ದೇಶನಗಳು ಹೋಗಬೇಕಾಗುತ್ತದೆ. ಅಲ್ಲಿ ರೈತರಿಗೆ ಯಾರಿಗೂ permanent ಆಗಿ ಜಾಗ ಬೇಕಾಗುವುದಿಲ್ಲ. ಈ ಸಂಸ್ಕರಣೆ ಹೆಸರಿನಲ್ಲಿ ಏನಾಗುತ್ತದೆ, ಕೆಲವು ರೈಸ್ ಮಿಲ್‌ನವರು ರೈತರ ಹೆಸರಿನಲ್ಲಿ ಜಾಗ ಹೊಡೆದುಬಿಡುತ್ತಾರೆ. ಅದಕ್ಕೆ ಅವಕಾಶವಾಗಬಾರದು. ಮಾನ್ಯ ಸಚಿವರು ಹೇಳಿದ ಹಾಗೆ perishable itemಗೆ ಮಾತ್ರ ಅಲ್ಲಿ ಸ್ಥಳಾವಕಾಶವನ್ನು ಕೊಡುವುದೆಂದು ಹೇಳಿದ್ದಾರೆ. ಹಾಗಾಗಿ ಸಂಸ್ಕರಣೆ ಎಂದರೆ it is only for perishable goodsಗೆ ಎಂದು ಸರ್ಕಾರ ಅದರ ಬಗ್ಗೆ ಗಮನ ಇಟ್ಟುಕೊಂಡು ಆದೇಶ ಮಾಡಬೇಕಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಮಾನ್ಯ ಅಧ್ಯಕ್ಷರೆ, ಈ ಒಂದು ವಿಧೇಯಕವನ್ನು ಏನು ತಂದಿದ್ದಾರೆ, ಗ್ರಾಮೀಣ ಪ್ರದೇಶದ ಮಾರುಕಟ್ಟೆ ಅನುಭವವಿದ್ದಂತಹವರು ಈ ವಿಧೇಯಕವನ್ನು ತರಬಾರದು. ಏಕೆಂದರೆ ತರಕಾರಿಗಳನ್ನು ರೈತ APMC yardಗೆ ತೆಗೆದುಕೊಂಡು ಬಂದಾಗ ಯಾವ ಗ್ರಾಹಕರು ಅಲ್ಲಿ ಕೊಂಡುಕೊಳ್ಳುವುದಕ್ಕೆ ಬರುತ್ತಾರೆ? ಇದು ನನಗೆ ಗೊತ್ತಾಗುವುದಿಲ್ಲ. ದಳ್ಳಾಳರು ಇಲ್ಲವೆಂದರೆ ನಿಮ್ಮ ಒಂದು ಮೂಟೆ ತರಕಾರಿಯನ್ನು ಕೂಡ ರೈತ ತೆಗೆದುಕೊಂಡು ಹೋಗುವುದಿಲ್ಲ. ಆ ದಳ್ಳಾಳರು ತೆಗೆದುಕೊಂಡು ಹೊರ ರಾಜ್ಯಗಳಲ್ಲಿ ಎಲ್ಲಿ ಬೇಡಿಕೆ ಇರುತ್ತದೆ, ಎಲ್ಲಿ

ಮಾರುಕಟ್ಟೆ ಇರುತ್ತದೆ ಅಲ್ಲಿಗೆ ಕಳುಹಿಸಬೇಕು. ನಮ್ಮ ಅರಸೀಕೆರೆಯಲ್ಲಿ regulated marketನಲ್ಲಿ ತರಕಾರಿಗಳನ್ನು ಜೋಡಿಸಿಟ್ಟುಕೊಂಡಿರುತ್ತಾರೆ. ಎಪಿಎಂಸಿ ಯಾರ್ಡ್ ಒಳಗೆ ಕೊಳೆತಿರುವ ತರಕಾರಿ ಎಸೆದಿರುವುದನ್ನು ಗುಡಿಸುವವರು ಇಲ್ಲ, ಅಲ್ಲಿ ಕೊಳೆತು ನಾರುತ್ತಿದೆ, ಅದನ್ನು ಸ್ವಚ್ಛ ಮಾಡುವವರು ಇಲ್ಲ. ಎಪಿಎಂಸಿ ಯಾರ್ಡ್‌ನಿಂದ ತೆಗೆದು ಎಲ್ಲಾದರೂ ತರಕಾರಿ ಮಾರುಕಟ್ಟೆಯನ್ನು ಪ್ರತ್ಯೇಕವಾಗಿ ವಿಂಗಡಣೆ ಮಾಡಿ. ರೈತ ತರಕಾರಿಯನ್ನು ತರುತ್ತಾನೆ, ಆ ತರಕಾರಿಯನ್ನು ತಂದ ತಕ್ಷಣ ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವತ್ತು ಯಾರೂ ಗ್ರಾಹಕರು ಬರುವುದಿಲ್ಲ. ರೈತ ಅದನ್ನು ಎಸೆದು ಹೋಗಬೇಕೆ? ಆ ತರಕಾರಿಯನ್ನು ಇಟ್ಟು ಹೋಗುವುದಕ್ಕೆ ಹಾಗೂ ಅವನು ಮಾರನೇ ದಿನ ಬಂದು ಮಾರುವುದಕ್ಕೆ ಒಂದು cold storage ಅನ್ನು ನಿರ್ಮಾಣ ಮಾಡಬೇಕು. ತರಕಾರಿ ಮಾರುಕಟ್ಟೆ ಮಾಡಿ ಈ ದೇಶದಲ್ಲಿ ನೇರವಾಗಿ ಗ್ರಾಹಕರಿಗೆ ಖರೀದಿಯಾಯಿತು ಎಂದರೆ ಈ ದೇಶ ಪಾವನವಾಯಿತು ಎಂದು ಅರ್ಥ. ಯಾವ ಉದ್ದೇಶಕ್ಕೋಸ್ಕರ ಈ ಕಾನೂನನ್ನು ತಂದಿದ್ದೀರಿ? ಆ ಎಪಿಎಂಸಿ ಯಾರ್ಡ್ ಒಳಗೆ ಕೊಪ್ಪರಿಗೆಗೆ ಜಾಗವಿಲ್ಲ. ಯಾರೋ strike ಮಾಡಿದರು ಆಕ್ಟ್ ಪ್ರಕಾರ ಎಪಿಎಂಸಿ ಯಾರ್ಡ್‌ಗೆ ಹೋಗಲೇಬೇಕು ಎಂದು ಹೇಳಿದ್ದಕ್ಕೆ ನಾವು ಮೂರು ನಾಲ್ಕು ಮಳಿಗೆ ಕೊಡಿಸಿ, ಎಲ್ಲಾ ತರಕಾರಿಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಇಟ್ಟಿದ್ದಕ್ಕೆ ಇವತ್ತು ಗಬ್ಬು ನಾರುತ್ತಿದೆ. ವರ್ತಕರು ನಾಲ್ಕೈದು ಸಾರಿ ಗಲಾಟೆ ಮಾಡಿದ್ದಾರೆ, ಪ್ರತಿಭಟನೆಯಾಗಿದೆ. ಎಪಿಎಂಸಿ ಯಾರ್ಡ್ ಎರಡು ಅಥವಾ ಮೂರು ಕಿ.ಮೀಟರ್ ದೂರದಲ್ಲಿ ಇರುತ್ತದೆ. ಇಂತಹ ಸಂದರ್ಭದಲ್ಲಿ ನೇರವಾಗಿ ಗ್ರಾಹಕರು ಕೊಳ್ಳುತ್ತಾರೆನ್ನುವುದಾದರೆ ಏನು ಹೇಳಬೇಕೆಂದು ನನಗೆ ಗೊತ್ತಾಗುತ್ತಿಲ್ಲ. ಯಾರು ಪುಡಿ ವರ್ತಕರು ಇರುತ್ತಾರೆ, ಅವರೇ ಬರಬೇಕು, ಅವರೇ ತರಕಾರಿ ತೆಗೆದುಕೊಳ್ಳಬೇಕು, ಅವರು ತೆಗೆದುಕೊಂಡು ಹೋಗಿ ಊರೂರಿನಲ್ಲಿ, ಕೇರಿ ಕೇರಿಯಲ್ಲಿ ಮಾರಬೇಕು. ರೈತ ತಾತ್ಕಾಲಿಕವಾಗಿ ಬಂದು ಒಂದು ದಿವಸದ ಮಟ್ಟಿಗೆ ಅಂಗಡಿ ಇಟ್ಟುಕೊಂಡು ಹೋಗುತ್ತಾನೆ ಎಂದರೆ ಅದು ಅಂಗಡಿಯೇ? ತರಕಾರಿ ಮುಟ್ಟಿದರೆ ಏನಪ್ಪ ಎನ್ನುವ ಹಾಗೆ ಇರುತ್ತದೆ.

ಅದನ್ನು ತೆಗೆದುಕೊಂಡು ಹೋದರೆ ಸಾಕು ಎನ್ನುವಂತಿರುತ್ತದೆ. ಅದಕ್ಕೆ ಆದಂತಹ ವರ್ತಕರಿದ್ದಾರೆ. ನಿಜವಾಗಿ ಈ ಕಾನೂನು ಸರಿಯಿಲ್ಲ, ನಾನು ಇದನ್ನು ವಿರೋಧ ಮಾಡುತ್ತಿದ್ದೇನೆ.

ಶ್ರೀ ಎನ್.ಹೆಚ್. ಕೋನರೆಡ್ಡಿ (ನವಲಗುಂದ):– ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ತರಬೇಕೆಂದು ಏನು ನಿರ್ಧಾರ ಮಾಡಿದ್ದಾರೆ, ನಾವು ಕೃಷಿಕರಾದವರು ರೈತರ ಪರವಾಗಿ ನಿರ್ಣಯ ಮಾಡಬೇಕಾದಾಗ ಇದು ಯೋಗ್ಯವೆ ಎನ್ನುವ ತೀರ್ಮಾನಕ್ಕೆ ಬರಬೇಕು. ರೈತ ತಂದಂತಹ ಬೆಳೆಗಳನ್ನು ಇಡುವುದಕ್ಕೆ ಯಾವುದೇ ಎಪಿಎಂಸಿಯಲ್ಲಿ ಜಾಗವಿಲ್ಲ. ಜಾಗಗಳನ್ನು ಮಾರುವುದು ಒಂದು ಕಡೆಯಾದರೆ, ನನ್ನ ಕ್ಷೇತ್ರದಲ್ಲಿ ಆರು ಲಕ್ಷ ಕ್ವಿಂಟಾಲ್ ಗೋವಿನ ಜೋಳ ಬೆಳೆದಿದ್ದಾರೆ. ಅದೇ ರೀತಿ ಈರುಳ್ಳಿಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತೇವೆ. ಕಡ್ಲೆ, ಜೋಳ, ಗೋಧಿ ಹಾಗೂ ಉತ್ತರ ಕರ್ನಾಟಕದ ಮೆಣಸಿನಕಾಯಿ ಇರಬಹುದು, ಇವುಗಳನ್ನು stock ಮಾಡುವುದಕ್ಕೆ ಒಂದು ಗೋಡೌನ್ ಇಲ್ಲ, cold storage ಇಲ್ಲ, ಅಂಥದ್ದಕ್ಕೆ ತಾವು ವಿಶೇಷ ಗಮನ ಕೊಡಬೇಕು ಹೊರತಾಗಿ ನೀವು ಕಾಯಿದೆ implement ಮಾಡಿ ರೈತ ಅಲ್ಲಿ ಮಾರಬಾರದು ಇಲ್ಲಿ ಮಾರಬಾರದು ಎನ್ನದೆ ಮುಕ್ತವಾಗಿ ಇರಬೇಕು. ಎಪಿಎಂಸಿಗೆ ಆದಾಯ ಬಂದಿರಬೇಕು ಮತ್ತು ರೈತನಿಗೆ ಅನುಕೂಲವಾಗುವಂತಹ ಕಾಯಿದೆಯನ್ನು ತರಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಷಡಕ್ಷರಿ (ತಿಪಟೂರು):– ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ತಂದಿರುವುದಕ್ಕೆ ಸ್ವಾಗತಿಸುತ್ತೇನೆ. ಇವತ್ತು ರೈತ ತಾನು ಬೆಳೆದಂತಹ ತರಕಾರಿಯನ್ನು ರಸ್ತೆ ಬದಿಯಲ್ಲಿ ಹಾಕಿಕೊಂಡು 10–12 ರೂಪಾಯಿ ಕಮಿಷನ್ ಕೊಟ್ಟು, ಬಹಳ ಒದ್ದಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಒಂದು ವಿಷಯದಲ್ಲಿ ಗಮನಿಸಬೇಕಾಗುತ್ತದೆ. ರೈತ ಬೆಳೆದಂತಹ ಪದಾರ್ಥವನ್ನು ನೇರವಾಗಿ ತಂದು ಮಾರುವುದಕ್ಕೆ ಒಂದು ವ್ಯವಸ್ಥೆ ಮಾಡಿ. ಅದೇ ರೀತಿ ಖರೀದಿದಾರರಿಗೂ ಕೂಡ ವ್ಯವಸ್ಥೆ ಮಾಡಿದರೆ ಹಣ್ಣು ಮತ್ತು ತರಕಾರಿ ಬೆಳೆದಂತಹ ರೈತರಿಗೆ ಅನುಕೂಲವಾಗುತ್ತದೆ. ರೈತನಿಂದ ನೇರವಾಗಿ ಗ್ರಾಹಕನೇ ಖರೀದಿ ಮಾಡುತ್ತಾನೆ ಎಂದರೆ ಹೆಚ್ಚು ಪದಾರ್ಥ ಬಂದಾಗ

ಕಷ್ಟವಾಗುತ್ತದೆ. ಇದಕ್ಕೆ cold storage ಕೊಡಬೇಕಾಗುತ್ತದೆ. ರೈತ ತೆಗೆದುಕೊಂಡು ಬಂದ ಮಾಲು ಉಳಿಯುತ್ತದೆ, ಅದನ್ನು cold storageನಲ್ಲಿಟ್ಟು, ಇನ್ನೊಂದು ದಿನ ಮಾರತಕ್ಕಂಥ ವ್ಯವಸ್ಥೆ ಮಾಡಬೇಕಾಗುತ್ತದೆ. ಇದಕ್ಕೆ ಸ್ಥಳಾವಕಾಶ ಬೇಕಾಗುತ್ತದೆ, ಸರ್ಕಾರ ಇದರ ಬಗ್ಗೆ ಗಂಭೀರವಾದ ಚಿಂತನೆ ಮಾಡಬೇಕು. ನನ್ನ ಕ್ಷೇತ್ರದಲ್ಲಿ ಹಣ್ಣು ಮತ್ತು ತರಕಾರಿ ಮಾರುಕಟ್ಟೆಯನ್ನು ಪ್ರಾರಂಭ ಮಾಡುತ್ತಿದ್ದೇವೆ. ರೈತರು ಬೀದಿ ಬದಿಯಲ್ಲಿ ಮಾರುತ್ತಿದ್ದಾರೆ. ಅಂತಹವರಿಗೆ ಅಂತಹ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ರೈತ ಬೆಳೆದು ನೇರವಾಗಿ ಗ್ರಾಹಕರಿಗೆ ಕೊಡುವ ವ್ಯವಸ್ಥೆಯಾದರೆ ಇನ್ನೊಂದು ಕಡೆ ಖರೀದಿದಾರರಿಗೂ ವ್ಯವಸ್ಥೆ ಮಾಡಿಕೊಟ್ಟರೆ, ಈ ಬಿಲ್ ತಂದಿರುವುದರ ಉದ್ದೇಶ ಸರಿ ಇರುತ್ತದೆಂದು ನಾನು ಸಲಹೆ ಕೊಡುತ್ತೇನೆ.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ):– ಮಾನ್ಯ ಅಧ್ಯಕ್ಷರೆ, ನಾನು ಅವರ ಕಾಳಜಿಯನ್ನು ಸ್ವಾಗತ ಮಾಡುತ್ತೇನೆ. ಅವರ ಕಾಳಜಿ ಬಗ್ಗೆ ನನ್ನದೇನೂ ತಕರಾರಿಲ್ಲ. ರೈತರು ಬೆಳೆದಂತಹ ತರಕಾರಿಗಳನ್ನು ನೇರವಾಗಿ ಮಾರಿದರೆ ದಲ್ಲಾಳಿಗಳಿಗೆ ಹೋಗುವ ಕಮಿಷನ್ ಉಳಿಯುತ್ತದೆ ಎನ್ನುವ ನಿಮ್ಮ ಉದ್ದೇಶ ಮತ್ತು ಮನಸ್ಥಿತಿಯನ್ನು ನೋಡಿದರೆ ಒಳ್ಳೆಯದು ಎಂದು ಅನಿಸುತ್ತದೆ. ಆದರೆ ತಮಗೆ ಮತ್ತು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ನೀವು ಸಂತೆ ನಡೆಯುವ ಜಾಗಕ್ಕೆ ಹೋಗಿ. ಅಲ್ಲಿ ಜನರು ಈ ಜಾಗ ನನ್ನದು ಎಂದು ಬಾವುಟ ಹಾಕಿಕೊಂಡು ನಿಲ್ಲಿಸಿರುತ್ತಾರೆ. ಆ ಜಾಗದಲ್ಲಿ ಒಬ್ಬ ಒಂದು ಗಾಡಿ ನಿಲ್ಲಿಸಿದರೂ ಮೈಮೇಲೆ ಬರುತ್ತಾರೆ. ಇಷ್ಟು ವ್ಯವಸ್ಥಿತವಾದ ಒಂದು ಗುಂಪು ಅಲ್ಲಿ ರಚನೆಯಾಗಿರುತ್ತದೆ. ಆ ವ್ಯಾಪಾರಸ್ಥರ ಗುಂಪಿನ ಮಧ್ಯೆ ನಮ್ಮ ಪಾಪದ ರೈತರು ಹೋಗಿ ಹೋರಾಟ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ಗಮನಿಸಬೇಕು. ನನಗೆ ಗೊಂದಲ ಇರುವುದೇನೆಂದರೆ ರೈತರು ಬಂದು ವ್ಯಾಪಾರ ಮಾಡುವ ಜಾಗವನ್ನು ಅವರಿಗೆ ಬಾಡಿಗೆ ಆಧಾರದ ಮೇಲೆ ಕೊಡುತ್ತೀರೋ, ಲೀಸ್ ಆಧಾರದ ಮೇಲೆ ಕೊಡುತ್ತೀರೋ, ಇಲ್ಲ ಅವರಿಗೆ ಶಾಶ್ವತವಾಗಿ ಇಷ್ಟು ದುಡ್ಡು ಕಟ್ಟಿದರೆ ಜಾಗವನ್ನು ಕೊಡುತ್ತೀರೋ ಎನ್ನುವ

ಪ್ರಶ್ನೆ ಬರುತ್ತದೆ. ಜಾಗವನ್ನು ಲೀಸ್ ಕೊಡುವುದು ಎಂದರೆ, ಇದರ ಹಿಂದೆ ರೈತರ ಹೆಸರಿನಲ್ಲಿ ವ್ಯಾಪಾರಸ್ಥರು ದುರುಪಯೋಗ ಪಡಿಸಿಕೊಳ್ಳುವಂತಹ ದೊಡ್ಡ ಸಾಧ್ಯತೆ ಇದೆ. ಹಾಗಾಗಿ ತಾವು ಗಮನಿಸ ಬೇಕಾಗಿರುವುದು ಏನೆಂದರೆ ಮಾನ್ಯ ವಿಶ್ವೇಶ್ವರ ಹೆಗಡೆಯವರು ಬಹಳ ಸರಿಯಾಗಿ ಹೇಳಿದರು. ತಮಗೂ ಕೂಡ ಅದರ ಅನುಭವ ಇದೆ. ಎಪಿಎಂಸಿ ಯಲ್ಲಿ 10–20 ಸಾವಿರ ರೂಪಾಯಿಯ ಅಧಿಕಾರವನ್ನು District ಅಧಿಕಾರಿಗೆ ಕೊಟ್ಟಿಲ್ಲ. ತಾವು ಇದರಲ್ಲಿ ಸೇರಿಸಿಬಿಡಿ. ಜಿಲ್ಲಾಮಟ್ಟದ ಅಧಿಕಾರಿಗೆ ಲಿಮಿಟ್ ಇಷ್ಟು, ಅಲ್ಲಿರುವ ಸೆಕ್ರೆಟರಿಗೆ ಇಷ್ಟು, ಬಾಡಿಗೆ ಇಷ್ಟು, ಎಂದು ಹಂತ ಹಂತವಾಗಿ ಇಷ್ಟಿಷ್ಟು ಹಣ ಖರ್ಚು ಮಾಡಬಹುದು ಎಂದು ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಕೊಡಿ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಬೇಗಾರ ಎನ್ನುವ ಊರು ಇದೆ. ಅಲ್ಲಿ ಎಪಿಎಂಸಿಯವರು ಒಂದು ಸಂತೆ ಮೈದಾನ ಕಟ್ಟುತ್ತಿದ್ದಾರೆ. ಅದು ಶುರುವಾಗಿ ಎಷ್ಟು ದಿನವಾಯಿತು ಎಂದು ಗೊತ್ತಿಲ್ಲ, ಅದರ ಬಗ್ಗೆ ಕೇಳಿದರೆ ಬೆಂಗಳೂರಿನಿಂದ ಪರ್ಮಿಷನ್ ಬರಬೇಕೆಂದು ಹೇಳುತ್ತಾರೆ. ಆ ಪರ್ಮಿಷನ್ ಎನ್ನುವುದೇ ಬಹಳ ಕಷ್ಟ. ಮಾನ್ಯ ಶಿವಲಿಂಗೇಗೌಡರು ವ್ಯಕ್ತಪಡಿಸಿರುವಂತಹ ಅನುಮಾನ ಬಹಳ ಸರಿಯಿದೆ. ಎಪಿಎಂಸಿ ಗಳು ಊರ ಹೊರಗಡೆ ಇವೆ. ಸ್ವಲ್ಪ ಸ್ವಲ್ಪ ತರಕಾರಿಯನ್ನು ಯಾರು ಬಂದು ತೆಗೆದುಕೊಳ್ಳುತ್ತಾರೆ? ತಾವು ಇದನ್ನು ಗಮನಿಸಿ ಮತ್ತು ರೈತರಿಗೆ ಮತ್ತು ವರ್ತಕರಿಗೆಂದು ಎರಡು compartmentಗಳೆಂದು ಏನಾದರೂ ಮಾಡುತ್ತಿರಾ? ಉದಾಹರಣೆಗೆ ನಿನ್ನೆ ರವಿ ಬಂದು ವ್ಯಾಪಾರ ಮಾಡಬಹುದು, ನಾಳೆ ರಂಜನ್ ಬರಬಹುದು, ಇನ್ನೊಂದು ನಾಳೆಗೆ ಮತ್ತೊಬ್ಬ ರೈತ ಬರಬಹುದು. ಅವರಿಗೆ ಒಂದೇ ಜಾಗದಲ್ಲಿ permanent ಆಗಿ ಇರುವ ಅವಶ್ಯಕತೆ ಇದೆಯಾ? ರೈತನಿಗೆ ಏಕೆ ಇರುತ್ತದೆ? ಅವನು ಬೆಳೆ ಬಂದ ದಿವಸ ಮಾತ್ರ ಬರುವುದು ಬಿಟ್ಟರೆ, ಬೇರೆ ದಿವಸಗಳಲ್ಲಿ ಬರುವುದಕ್ಕೆ ಆಗುವುದಿಲ್ಲ. ಅವನಿಗೆ ಪ್ರತಿ ದಿವಸವೂ ಬೆಳೆ ಬಂದರೆ ಅವನು ರೈತನಾಗುವುದಿಲ್ಲ. ಅವನಿಗೆ ವ್ಯಾಪಾರಸ್ಥ, ದಳ್ಳಾಳಿಯೆಂದು ಕರೆಯುತ್ತಾರೆ. ಹಾಗಾಗಿ ರೈತರಿಗೆಂದು ಒಂದು line fix ಮಾಡಬೇಕಾಗುತ್ತದೆ. ಮತ್ತೆ ಇದು ಮೊದಲು ಯಾರು ಬಂದು ಕೂರುತ್ತಾರೆ, ಅವನಿಗೆ ಎಂದು

ಆಗುತ್ತದಾ, ಅಥವಾ ಹಿಂದಿನ ದಿವಸ ಬಂದು permission ತೆಗೆದುಕೊಂಡಿರುವವನಿಗೆ ಎಂದಾ? ಇದಕ್ಕೆ ಒಂದು ನಿರ್ದಿಷ್ಟವಾದ ಮಾನದಂಡವನ್ನು ನಿಗದಿ ಮಾಡಬೇಕು. ಮತ್ತೆ ನಿಮ್ಮ ಉದ್ದೇಶದ ಬಗ್ಗೆ ನನ್ನ dispute ಇಲ್ಲ. ತಾವು ಇಷ್ಟೆಲ್ಲಾ ವಿಚಾರಗಳ ಬಗ್ಗೆ ಸುದೀರ್ಘವಾಗಿ ಚಿಂತನೆ ಮಾಡದೇ, ಇದನ್ನು ಏನಾದರೂ ಜಾರಿಗೆ ತಂದರೆ, ಇದರಿಂದ ಅಕ್ರಮಗಳು ಜಾಸ್ತಿಯಾಗುವುದು ಬಿಟ್ಟರೆ, ರೈತರಿಗೆ ಅನುಕೂಲವಾಗುವುದಕ್ಕೆ ಸಾಧ್ಯವಿಲ್ಲ. ತಾವು ತಮ್ಮ ಉದ್ದೇಶದ ಜೊತೆಗೆ ಇದನ್ನೂ ಗಮನಸಿಬೇಕೆಂದು ನಾನು ನಮ್ಮ ಹತ್ತಿರ ಮನವಿ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಅಧ್ಯಕ್ಷರೆ, ಈಗ ರೈತರಿಗೆ ಅನುಕೂಲ ಮಾಡುವ ಸಲುವಾಗಿ ಈ ಬಿಲ್ ಅನ್ನು ತಂದಿದ್ದೇವೆಂದು ಹೇಳಿದ್ದಾರೆ. ಕೆಲವು ಕಡೆಗಳಲ್ಲಿ ಒಂದು ಇಂಚು ಜಾಗ ಕೂಡ ಇಲ್ಲ. ರೈತರು APMC Market Yard ಒಳಗಡೆ ಜಾಗವೇ ಇಲ್ಲ ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರ ಮುಧೋಳ ಮಾರುಕಟ್ಟೆಯಲ್ಲೂ ಜಾಗ ಇಲ್ಲ, ಲೋಕಾಪುರ ಮಾರುಕಟ್ಟೆಯಲ್ಲೂ ಜಾಗವಿಲ್ಲ, ಮತ್ತೆ ಮಹಾಲಿಂಗಪುರ ಮಾರುಕಟ್ಟೆಯಲ್ಲೂ ಇಲ್ಲ, ನನ್ನದೇ ಮೂರು ಮಾರುಕಟ್ಟೆಗಳು ಇವೆ. ನಿಮ್ಮ ಮಹಾಲಿಂಗಪುರ ಎ.ಪಿ.ಎಂ.ಸಿ. ಮಾರುಕಟ್ಟೆಯ ಕೆಳಗೆ ಎರಡು ಉಪ ಮಾರುಕಟ್ಟೆಗಳಿವೆ. ಅವರಿಗೆ ತಾವು ಯಾವ ರೀತಿ ಅವಕಾಶ ಮಾಡಿಕೊಡುತ್ತೀರೆಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಎಲ್ಲಾ ಮಾನ್ಯ ಸದಸ್ಯರುಗಳು ಕೂಡ ರೈತರ ಬಗ್ಗೆ ಬಹಳ ಕಳಕಳಿಯನ್ನು ವ್ಯಕ್ತಪಡಿಸಿ, ರೈತ ಅದರಿಂದ ಪ್ರಯೋಜನ ಪಡೆಯಬೇಕಾದಾಗ ಯಾವ ರೀತಿಯಾದಂಥ ಅನುಮಾನಗಳಿರುತ್ತವೆ, ತೊಂದರೆಗಳಿರುತ್ತವೆ.

ಅಧ್ಯಕ್ಷರು:– ಮಾನ್ಯ ನಿಂಗಯ್ಯನವರು ಏನೋ ಹೇಳುತ್ತಾರೆ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಸಚಿವರೆ, ನಮ್ಮ ಶಾಸಕರು, ಮಾಜಿ ಸಚಿವರು ಒಂದು ಮಾತನ್ನು ಹೇಳುತ್ತಾರೆ, ಕೇಳಿ.

ಶ್ರಿ ಬಿ.ಬಿ. ನಿಂಗಯ್ಯ (ಮೂಡಗೆರೆ):– ಮಾನ್ಯ ಅಧ್ಯಕ್ಷರೆ, ಸರ್ಕಾರ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ, ನಿಯಂತ್ರಣ ಮತ್ತು ಅಭಿವೃದ್ಧಿ ತಿದ್ದುಪಡಿ ವಿಧೇಯಕ 2014, ಇದನ್ನು ತಂದಿರುವಂಥದ್ದು ಒಂದು ಸ್ವಾಗತಾರ್ಹ ವಿಧೇಯಕವಾಗಿದೆ. ಆದರೆ, ನಮ್ಮ ಸ್ನೇಹಿತರೆಲ್ಲಾ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಹಾಗೆ ರೈತರ ಬಗ್ಗೆ ನಾನೂ ಕೂಡ ಒಂದೂವರೆ ವರ್ಷಗಳ ಕಾಲ ಇಲಾಖೆಯ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಇವತ್ತಿನವರೆಗೂ ಕೂಡ ಮಾರುಕಟ್ಟೆಗಳು ದಳ್ಳಾಳಿಗಳ ನಿಯಂತ್ರಣದಲ್ಲೇ ಇವೆ. ಇದಕ್ಕೆ ಕಾರಣ ರೈತ ಅಸಂಘಟಿತ, ಅವನು ತಂದಂಥ ಮಾಲಿನ ವಿಷಯವಾಗಿ, ನಾನು ಮಂತ್ರಿಯಾಗಿದ್ದಾಗಲೂ ಕೂಡ ಹೇಳಿದ್ದೆ. ರೈತ ಸಂತೆಗಳು ಆಗಬೇಕು, ಅದು ರೈತರ ನಿಯಂತ್ರಣದಲ್ಲಿ ಬರಬೇಕೆಂದು ಹೇಳಿದ್ದೆ. ಆದರೆ ಇವತ್ತಿನವರೆಗೂ ಕೂಡ, markets are being controlled by the ದಳ್ಳಾಳಿ only, mediators, ಆ ದೃಷ್ಟಿಯಿಂದ ರೈತರು ತಂದಂಥ ಮಾಲನ್ನು ಅವರೇ ಅಲ್ಲಿ ನೇರವಾಗಿ ಗ್ರಾಹಕರಿಗೆ ಮಾರುವಂಥ ಒಂದು ಉದ್ದೇಶ ಇಟ್ಟುಕೊಂಡು ತಂದಿರುವಂಥ ಈ ತಿದ್ದುಪಡಿ ವಿಧೇಯಕ ಏನಿದೆ. ಇದು ಸ್ವಾಗತಾರ್ಹವಾಗಿದೆ, ಆದರೆ ನಮ್ಮ ಸ್ನೇಹಿತರು ಹೇಳಿದ ಹಾಗೆ, ಇವತ್ತು perishable commodities ಹಣ್ಣು–ತರಕಾರಿ, ನಾನು ಮಂತ್ರಿಯಾಗಿದ್ದಾಗ NHB (National Horticulture Board) ನಾನು ಬರೆದಿದ್ದೆ. ಸುಮಾರು 40 ಕೋಟಿ ರೂ.ಗಳು ಬೇಕು. ನಾವು ಅಲ್ಲಲ್ಲಿ cold chains ಕಟ್ಟಬೇಕೆನ್ನುವಂಥದ್ದು. ರೈತರು ಬೆಳೆದ ಹಣ್ಣು–ತರಕಾರಿ ಒಮ್ಮೆಗೆ ಕಟಾವಿಗೆ ಬರುತ್ತದೆ, ಅದನ್ನು ಕಟಾವು ಮಾಡಿ ಮಾರುಕಟ್ಟೆಗೆ ತರುತ್ತಾರೆ, ಅದನ್ನು ತಂದು ಮಾರುಕಟ್ಟೆಯಲ್ಲಿ ಮಾರಾಟ ಮಾಡುವಾಗ ಇಡೀ ವ್ಯಾಪಾರಿಗಳು ಒಗ್ಗಟ್ಟಾಗಿರುತ್ತಾರೆ. ಅವರು ಕೇಳಿದ rateಗೆ ಮಾರಾಟ ಮಾಡುವಂಥ ಪರಿಸ್ಥಿತಿ ಇದೆ. ಆ ದೃಷ್ಟಿಯಿಂದ ಇದನ್ನು ಶೇಖರಣೆ ಮಾಡುವುದಕ್ಕೆ cold storageಗಳ ಅವಶ್ಯಕತೆ ಕೂಡ ಇದೆ. ಸರ್ಕಾರ ಅದರ ಬಗ್ಗೆ ಕೂಡ ಹೆಚ್ಚು ಗಂಭೀರವಾಗಿ ಯೋಚನೆ ಮಾಡಬೇಕೆಂಬ ಸಲಹೆಯನ್ನು

ಮಾಡುತ್ತಾ, ಈಗ ತಂದಿರುವಂಥ ವಿಧೇಯಕ ರೈತರಿಗೆ help ಆಗುತ್ತದೆ. ಆದರೂ ನಮ್ಮ ಸ್ನೇಹಿತರು ಹೇಳಿದ ಹಾಗೆ ಸಣ್ಣ–ಪುಟ್ಟ ಮಂಜೂರಾತಿ ಆದರೂ ಕೂಡ ದಿನಕ್ಕೆ ಸಾವಿರಾರು, ಲಕ್ಷಾಂತರ ರೂ.ಗಳನ್ನು collect ಮಾಡುತ್ತಾರೆ. ಯಾವುದೇ ಒಂದು ಮಂಜೂರಾತಿಗೆ, ಅಗತ್ಯ ಕೆಲಸಗಳಿಗೆ ಬೇಕೆಂದರೂ ಇಲ್ಲಿಗೆ ಬರಬೇಕು. ಎಲ್ಲಾ power centralize ಆಗಿದೆ. ಅದಕ್ಕೆ ತಾವು ಕಾನೂನಿನಲ್ಲಿ ತಿದ್ದುಪಡಿಯನ್ನು ತಂದು ರೈತರಿಗೆ ಅನುಕೂಲವನ್ನು ಮಾಡಿಕೊಬೇಕೆಂದು ಹೇಳಿ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಅನೇಕ ಉಪಯುಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಈಗ ವಸ್ತುಸ್ಥಿತಿ ಎಂದರೆ, ಈಗಾಗಲೇ ರೈತರು agricultureನಿಂದ horticultureಗೆ ಅಂದರೆ, ತೋಟಗಾರಿಕೆ ಬೆಳೆಗಳಿಗೆ ಹೆಚ್ಚಿಗೆ ಹೋಗುತ್ತಿರುವುದನ್ನು ನಿರಂತರವಾಗಿ ನಾವು ನೋಡುತ್ತಿದ್ದೇವೆ. ಯಾವುದೇ ತಾಲ್ಲೂಕುಗಳ bus standನಲ್ಲಿ ನೋಡಿ, ಆ ಬಸ್ ಸ್ಟ್ಯಾಂಡ್‌ಗಳಲ್ಲಿ ತರಕಾರಿಗಳನ್ನು ಹಾಕಿಕೊಂಡು ಕುಳಿತಿರುವ ದೃಶ್ಯವನ್ನು ನಾವು ನೋಡುತ್ತೇವೆ. ಇದಕ್ಕೋಸ್ಕರ ತಮಿಳುನಾಡಿನಲ್ಲಿ ಒಂದು ಪ್ರಯೋಗ ನಡೆದಿದೆ. ಈಗಾಗಲೇ ಮಾನ್ಯ ನಿಂಗಯ್ಯನವರು ಸಲಹೆ ಮಾಡಿದ ರೀತಿಯಲ್ಲಿ , ತಮಿಳುನಾಡಿನಲ್ಲಿ ರೈತರ ಸಂತೆ ಎನ್ನುವುದು ಅತ್ಯಂತ ಯಶಸ್ವಿಯಾಗಿ ಜಾರಿಗೊಳಿಸಿದ್ದಾರೆ. ಇಲ್ಲಿ ತರಕಾರಿಯನ್ನು ಮಾರಾಟ ಮಾಡುವುದಕ್ಕೆ ಮಾರುಕಟ್ಟೆ, ಆ ಮಾರುಕಟ್ಟೆಗೆ ರೈತರೇ ಬರುತ್ತಾರೆ, ಅದನ್ನು ಕೊಳ್ಳುವುದಕ್ಕೂ ಅವರೇ ಬರುತ್ತಾರೆ, ಅಲ್ಲಿ ಮಧ್ಯವರ್ತಿಗಳ ಪ್ರಶ್ನೆ ಇಲ್ಲ. ಅಲ್ಲಿ ಹೇಗೆಂದರೆ, ಜಿಲ್ಲಾ ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿದ್ದರೆ, ಬೆಳಿಗ್ಗೆ 6 ಗಂಟೆಗೆ ತಾಲ್ಲೂಕಿನ ಎಲ್ಲಾ ಅಧಿಕಾರಿಗಳು ಮಾರುಕಟ್ಟೆಯಲ್ಲಿ ಕೊಳ್ಳುವಂಥ ಕೆಲಸವನ್ನು ಮಾಡುತ್ತಾರೆ. ಹಾಗಾಗಿ ರೈತರಿಗೆ ಗ್ರಾಹಕರಿಗೆ ನೇರವಾದಂಥ ಸಂಬಂಧ ಮಾಡುವಂಥ qualityಯನ್ನು upgrade ಮಾಡುವಂಥ ಒಂದು ವ್ಯವಸ್ಥೆಯನ್ನು ನಾನು ಅಲ್ಲಿ ನೋಡಿಕೊಂಡು ಬಂದಿದ್ದೇನೆ. ನಾನು ಕೊಯಮತ್ತೂರು ಮತ್ತು ಸೇಲಂಗೆ ಹೋಗಿ ನೋಡಿಕೊಂಡು ಬಂದಿದ್ದೇನೆ.

ನಾವು ಇದ್ದನ್ನು ಎಲ್ಲೋ ಒಂದು ಕಡೆ ಮಾಡಬೇಕು, ಒಂದೇ ದಿವಸದಲ್ಲಿ ಜಾರಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ APMC Marker ಗಳು ಊರಿಗೆ ಹತ್ತಿರವಾಗಿ ಇದೆಯೋ, ಅಂಥ ಕಡೆಗಳಲ್ಲಿ ಈ ವ್ಯವಸ್ಥೆಯನ್ನು ಮಾಡಿಕೊಟ್ಟರೆ ರೈತರಿಗೆ ಸಹಾಯವಾಗುತ್ತದೆನ್ನುವ ಉದ್ದೇಶವಿದೆ. ಅಲ್ಲಿ ಒಂದೇ ಸಾರಿಗೆ ರೈತ ತರಕಾರಿಯನ್ನು ಬೆಳೆದು, ಅದನ್ನು ಅಲ್ಲಿ ಮಾರಾಟ ಮಾಡುವುದಕ್ಕೆ ಹೋದಂಥ ಸಂದರ್ಭದಲ್ಲಿ, ಆ ಮಾರುಕಟ್ಟೆಗೆ ಸಂತೆ ದಿವಸ ಹೆಚ್ಚಿಗೆ ಜನರು ಬಂದೇ ಇರುತ್ತಾರೆ. ರೈತರು ಬಂದಿರುತ್ತಾರೆ, ಕೊಳ್ಳುವುದಕ್ಕೂ ಕೂಡ ಅವಕಾಶವಾಗುತ್ತದೆ, ಮತ್ತೆ ಒಳ್ಳೆಯ ಬೆಲೆಗೂ ಕೂಡ ಅವಕಾಶವಾಗುತ್ತದೆ. ಮಾರುಕಟ್ಟೆ ಪ್ರಾಂಗಣದಲ್ಲಿ ಹೆಚ್ಚು ಜನರು ಕೊಳ್ಳುವುದಕ್ಕೋಸ್ಕರ ಬರುತ್ತಾರೆ. ಇವತ್ತು ತರಕಾರಿ notify ಆಗಿರಲಿಲ್ಲ, ಅದಕ್ಕೋಸ್ಕರ ಈ ಅವಕಾಶವನ್ನು ಮಾಡಿದ್ದೇವೆ. ಇದು ಒಂದು ಪ್ರಯೋಗ ಅಷ್ಟೆ, ಈ ಪ್ರಯೋಗ ಯಶಸ್ವಿಯಾಗಬೇಕೆನ್ನುವಂಥ ಉದ್ದೇಶವಿದೆ. ಏಕೆಂದರೆ, ಗ್ರಾಹಕನಿಗೆ ಯಾವ ರೀತಿಯ grade ಇರಬೇಕು, ಹೇಗೆ ಇರಬೇಕೆನ್ನುವ ಅವಕಾಶ ಕೂಡ ಆಗಬೇಕು. ಆ ಕಾರಣಕ್ಕೋಸ್ಕರ ಈ ಪ್ರಯೋಗವನ್ನು ಮಾಡಿರುವಂಥದ್ದು, ತಮಿಳುನಾಡಿನಲ್ಲಿರುವಂಥ ಪ್ರಯೋಗವನ್ನೇ ಇಲ್ಲಿ ಯಶಸ್ವಿಯಾಗಿ ಜಾರಿಗೊಳಿಸಬೇಕೆನ್ನುವಂಥದ್ದು ನಮ್ಮ ಉದ್ದೇಶವಿದೆ. ಆದರೆ ಇವತ್ತು ಎ.ಪಿ.ಎಂ.ಸಿ. ಮಾರುಕಟ್ಟೆಗಳು ಊರಿನ ಪಕ್ಕದಲ್ಲಿರುವಂಥ ಕಡೆಗಳಲ್ಲಿ ಮೊದಲನೆಯದಾಗಿ ಕಾನೂನಿನಲ್ಲಿ ಅವಕಾಶ ಮಾಡಿದರೆ, ಅದು automatic ಆಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆಂಬ ದೃಷ್ಟಿಯಿಂದ ನಾವು ಇದನ್ನು ತಂದಿರುವಂಥದ್ದು. ಈಗ ನಾವು ತಂದಿರುವಂಥದ್ದು ವಿಧೇಯಕಕ್ಕೆ ತಿದ್ದುಪಡಿಯಲ್ಲ, ವಿಧೇಯಕ ತಿದ್ದುಪಡಿ ಎಂದರೆ ಅದೆಲ್ಲಾ ನಿಯಂತ್ರಣ ಮಾಡುವ ಅಧಿಕಾರ ಅಲ್ಲಿ elected body ಇರುತ್ತದೆ. ಅದು ಆ elected bodyಗೆ ಬರುವಂಥದ್ದು, ಈಗ ತಾವುಗಳು ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಂದ ಹಿಡಿದು ಎಲ್ಲರೂ ಏನೆಲ್ಲಾ ಅನುಮಾನಗಳನ್ನು ವ್ಯಕ್ತಪಡಿಸಿದ್ದೀರೋ, ಅದೆಲ್ಲಕ್ಕೂ ಕೂಡ ನಾವು Rulesನಲ್ಲಿ ತರುವಂಥ ಕೆಲಸವನ್ನು ಮಾಡುತ್ತೇವೆ. ಬಹುಶಃ ಅದಕ್ಕೆ ಕಾನೂನಿನಲ್ಲಿ ಬದಲಾವಣೆಯನ್ನು

ತಂದು, Rulesನಲ್ಲಿ ಇದೆಲ್ಲವನ್ನೂ ಕೂಡ ಮಾಡುತ್ತೇವೆ. ಆದರೆ ಯಾವುದೇ ಕಾರಣದಲ್ಲೂ ರೈತರು tax ಕೊಡಬೇಕಾಗಿಲ್ಲ, ತರಕಾರಿ ಮಾರಾಟ ಮಾಡುವವನು tax ಕೊಡಬೇಕಾಗಿಲ್ಲ, ಏನೂ ಕೊಡಬೇಕಾಗಿಲ್ಲ. ಅಕಸ್ಮಾತ್ ಅವನು ಮಾಲು ಏನಾದರೂ ಉಳಿದಿದ್ದರೆ, ಅದನ್ನು ಮಾರನೇ ದಿವಸ ಮಾರಾಟ ಮಾಡುವುದಕ್ಕೂ ಕೂಡ Market Committeeಯವರು ಅವಕಾಶ ಮಾಡಿ ಕೊಡುತ್ತಾರೆ. ಅದಕ್ಕೆ ಬೇಕಾಗಿರುವಂಥ ಮೂಲಭೂತ ಸೌಕರ್ಯಗಳನ್ನು.....

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಸಚಿವರೆ, ನಾನು ಅದನ್ನೇ ಕೇಳುತ್ತಿರುವುದು, ಯಾವುದರಲ್ಲಿ ಇಡುತ್ತಾರೆ?

ಶ್ರೀ ಟಿ.ಬಿ. ಜಯಚಂದ್ರ:– ದಯಮಾಡಿ ತಾವು ಸ್ವಲ್ಪ ಕೇಳಿ. ನೀವು ಅರಸೀಕೆರೆಯಲ್ಲಿ ಇಷ್ಟೊಂದು ತರಕಾರಿ ಬೆಳೆಯುವವರು, ಇದನ್ನು ತಾವು ಸ್ವಾಗತಿಸುತ್ತೀರೆಂದು ನಾವು ಅಂದುಕೊಂಡಿದ್ದೆವು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅದನ್ನು ಹೇಗೆ ಸ್ವಾಗತಿಸುತ್ತಾರೆ, ಸಾಧ್ಯವೇ ಇಲ್ಲ. ಇದನ್ನು ಏನಾದರೂ ಮಾಡಿದರೆ ದಳ್ಳಾಳಿಗಳು ಏನಾದರೂ ಬಂದರೆ ರೈತರು ತಂದು ಆಚೆಗೆ ಎಸೆದು ಹೋಗಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ದಳ್ಳಾಳಿಗಳ ಹಿಡಿತವನ್ನು ತಪ್ಪಿಸಬೇಕಾದರೆ ಇದು ಒಂದು ಮಾರ್ಗ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಇದನ್ನು ಸ್ವಾಗತಿಸುವುದಕ್ಕೆ ಆಗುವುದಿಲ್ಲ, ಇದು ಹೇಗೆ ಆಗುತ್ತದೆ?

ಶ್ರೀ ಟಿ.ಬಿ. ಜಯಚಂದ್ರ:– ತಾವು ಆಮೇಲೆ ಕೇಳಿ, ಈಗ ದಳ್ಳಾಳಿಗಳ ಹಿಡಿತವನ್ನು ತಪ್ಪಿಸಬೇಕು, ನೇರವಾಗಿ ಸಂಬಂಧವಿರಬೇಕು, ಮಧ್ಯವರ್ತಿಗಳಿರಬಾರದೆಂಬ ಕಾರಣಕ್ಕೋಸ್ಕರ ಇದನ್ನು ಪ್ರಾಯೋಗಿಕವಾಗಿ ಮಾಡಿರುವಂಥದ್ದು. ಇವತ್ತು ನಾನು ಕಣ್ಣಾರೆ ನೋಡಿದ್ದೇನೆ, ತಮಿಳುನಾಡಿನಲ್ಲಿ ಎಲ್ಲಾ ಕಡೆಗಳಲ್ಲೂ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಬಹಳ ಯಶಸ್ವಿಯಾಗಿ ನಡೆಯುತ್ತಿದೆ. ಆ

ಕಾರಣಕ್ಕೋಸ್ಕರ ಅದನ್ನು ಆಧರಿಸಿ, ನಾವು ಪ್ರಾರಂಭಿಕವಾಗಿ ಮಾರುಕಟ್ಟೆಯಲ್ಲಿ ಅವಕಾಶವನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಇದೊಂದು ಸಣ್ಣ ತಿದ್ದುಪಡಿಯನ್ನು ತಂದಿದ್ದೇವೆ, ಮಾರುಕಟ್ಟೆ ಕಮಿಟಿಗೆ ಎಲ್ಲಾ ಅಧಿಕಾರವಿದೆ. ರೈತ ಟ್ಯಾಕ್ಸ್ ಕೊಡಬೇಕಾಗಿಲ್ಲ, ರೈತರಿಗೆ ಕಾರ್ಡ್‌ಗಳನ್ನು ಕೊಡಬೇಕು, ಇದೆಲ್ಲದಕ್ಕೂ ಅವರಿಗೆ ಸುಲಭವಾಗಿ ತೊಂದರೆಯಾಗಬಾರದೆಂಬ ರೀತಿಯಲ್ಲಿ, ಅದನ್ನು Rulesನಲ್ಲಿ ತರುವಂಥ ಕೆಲಸವನ್ನು ಮಾಡುತ್ತೇವೆ. ತಾವೆಲ್ಲರೂ ಹೇಳಿದಂಥ ಸಲಹೆಗಳನ್ನು ನಿಯಮದಲ್ಲಿ ತಂದು, ತೊಂದರೆಯಾಗದ ರೀತಿಯಲ್ಲಿ... ...

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, .. .

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಗೋವಿಂದ ಕಾರಜೋಳರವರೆ, ನಾನು ಇನ್ನೂ ಮಾತು ಮುಗಿಸಿಲ್ಲ. ತಮ್ಮ ಊರಿನಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆ ಹತ್ತಿರದಲ್ಲಿದೆ, ಜಾಗವಿಲ್ಲ. ಅರಸೀಕೆರೆಯಲ್ಲಿದೆ, ಹೊಳೆನರಸಿಪುರದಲ್ಲಿದೆ. Problems ಇದೆ. ಇಲ್ಲಾಂತಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅರಸೀಕೆರೆಯಲ್ಲಿ ಜಾಗವಿಲ್ಲದೇ ಬೀದಿಯಲ್ಲಿ ಹಾಕಿಕೊಂಡಿದ್ದಾರೆ. ಅಲ್ಲಿ ಜಾಗ ಎಲ್ಲಿದೆ?

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಎ.ಪಿ.ಎಂ.ಸಿ.ಯಲ್ಲಿ ಒಂದೇ ಕಡೆ ಕಾಯಿಪಲ್ಯೆ ಮಾರುಕಟ್ಟೆ ಮಾಡುವುದಕ್ಕೆ, ರೈತರು ಬೆಳಿಗ್ಗೆ ತಂದು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡುವುದು ಒಳ್ಳೆಯ ವ್ಯವಸ್ಥೆ, ಆದರೆ ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ಒಂದು endನಿಂದ ಇನ್ನೊಂದು endಗೆ ಎ.ಪಿ.ಎಂ.ಸಿ.ಗಳಿರುತ್ತವೆ. ಅದು 4 ಕಿ.ಮೀ, 5 ಕಿ.ಮೀ, 6 ಕಿ.ಮೀ, ಹೋಗಬೇಕಾಗುತ್ತದೆ. ಇದನ್ನು ಯಾರೂ ಒಪ್ಪುವುದಿಲ್ಲ, ಮತ್ತೆ ಅವರು ರಸ್ತೆಯ ಮೇಲೆ ಕೂರುತ್ತರೆ. ನಮ್ಮಲ್ಲಿ ಆಗಿರುವುದನ್ನು ನಾನು ನಿಮಗೆ ಹೇಳುತ್ತಿದ್ದೇನೆ. ಅದಕ್ಕೆ ನಾವೇನು ಮಾಡಿದ್ದೇವೆ ಎಂದರೆ, ಸಾರ್ವಜನಿಕ ಉಪಯೋಗಕ್ಕಾಗಿ ಲೇಔಟ್‌ಗಳಲ್ಲಿರುವ ಜಾಗಗಳಲ್ಲಿ ಸಣ್ಣಸಣ್ಣ ಕಟ್ಟೆಗಳನ್ನು ಮಾಡಿ, ಮೇಲೆ ಷೀಟ್ ಹಾಕಿ, ನೆರಳು ಮಾಡಿಕೊಟ್ಟು ಅವರಿಗೆ ಮಾರಾಟ

ಮಾಡಲು ಹೇಳಿದ್ದೇವೆ. ಹೀಗೆ ನಾವು ಒಂದೊಂದು ಊರಿನಲ್ಲಿ ಐದಾರು ಕಡೆಗಳಲ್ಲಿ ಮಾಡಿದ್ದೇವೆ. ಅಂದರೆ ಆಯಾಯ ಭಾಗದಲ್ಲಿ, ಆಯಾಯ ವಾರ್ಡ್‌ನಲ್ಲಿ ಅವರು ತೆಗೆದುಕೊಳ್ಳುವ ಹಾಗೆ ಮಾಡಿದ್ದೇವೆ. ಹಾಗಾಗಿ, ಇದನ್ನು ಒಂದೇ ಕಡೆ ಮಾಡುವ ಬದಲಾಗಿ ನಾಲ್ಕೈದು ಕಡೆಗಳಲ್ಲಿ ಅಂದರೆ ಎಲ್ಲೆಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಇರುವ ಜಾಗ ಸಿಗುತ್ತದೆ, ಅಲ್ಲೆಲ್ಲ ಮಾರುಕಟ್ಟೆ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ ಮತ್ತು ಇದರಿಂದ ಜನಗಳಿಗೂ ಅನುಕೂಲವಾಗುತ್ತದೆ. ಬೆಳಗ್ಗೆ ಎದ್ದ ತಕ್ಷಣ ಪಕ್ಕದಲ್ಲಿರುವ ಅಲ್ಲಿಗೆ ಹೋಗಿ ತರಕಾರಿ ಖರೀದಿ ಮಾಡುತ್ತಾರೆ. ಅದಕ್ಕೆ ನಾನೇನು ಹೇಳುತ್ತೇನೆ ಎಂದರೆ, ಇದರಲ್ಲಿ ಇನ್ನೊಂದು ಶಬ್ದ ಸೇರಿಸಿ, ಪಟ್ಟಣಗಳಲ್ಲಿ ಎಲ್ಲೆಲ್ಲಿ ಸ್ಥಳದ ಅವಕಾಶವಿದೆ, ಆ ಪಟ್ಟಣದ ನಾಲ್ಕೂ ಮೂಲೆಗಳಲ್ಲಿ ಎಲ್ಲೆಲ್ಲಿ ಮಾಡಲು ಸಾಧ್ಯವಿದೆಯೋ, ಅಲ್ಲಿ ಎಲ್ಲ ಕಡೆಯೂ ಅವಕಾಶ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಸಭಾಧ್ಯಕ್ಷರೆ, ಈ ಬಿಲ್ ತರುವುದಕ್ಕೆ ನನ್ನ ವಿರೋಧವಿಲ್ಲ. ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಶರದ್ ಪವಾರ್‌ರವರು ಇಲ್ಲಿ ಬಂದು ನಾಲ್ಕು ಕಡೆ ಮಾರುಕಟ್ಟೆ ಮಾಡಬೇಕೆಂದು ಹೇಳಿ, ಅದಕ್ಕೆ 400 ಕೋಟಿ ರೂಪಾಯಿ ದುಡ್ಡು ಕೊಡುತ್ತೇವೆ ಎಂದು ಹೇಳಿ ಜಾಗವನ್ನೂ ನೋಡಿದ್ದರು. ನಾಲ್ಕೈದು ಹಳ್ಳಿಗಳವರು ಸೇರಿಕೊಂಡು ಹೇಗೆ ಹಾಲಿನ ಸೊಸೈಟಿಗಳನ್ನು ಮಾಡಿಕೊಂಡಿದ್ದಾರೋ ಆ ರೀತಿ ನೀವು ಸೊಸೈಟಿಗಳನ್ನು ಮಾಡಬೇಕಾಗುತ್ತದೆ. ಸೊಸೈಟಿ ಮಾಡಿ, ಆ ಸೊಸೈಟಿಯವರು ರೈತರಿಂದ ನೇರವಾಗಿ ತರಕಾರಿ ಖರೀದಿ ಮಾಡಿ ಅದನ್ನು ತಾಲ್ಲೂಕು ಕೇಂದ್ರಗಳಿಗೆ ತರಬೇಕು. ತಾಲ್ಲೂಕು ಕೇಂದ್ರ ಇರಬಹುದು, ಜಿಲ್ಲಾ ಕೇಂದ್ರ ಇರಬಹುದು, ಅಲ್ಲಿ ಎಷ್ಟು ಮಾರುಕಟ್ಟೆ ಮಾಡುವುದಕ್ಕೆ ಆಗುತ್ತದೋ ಮಾಡಬೇಕು. ಹೊರಗಡೆಗೆ ಎಕ್ಸ್‌ಪೋರ್ಟ್ ಮಾಡಿ. ಇವತ್ತು ಬೇರೆಬೇರೆ ಕಡೆಗಳಿಗೆ ಎಕ್ಸ್‌ಪೋರ್ಟ್ ಮಾಡಲು ಅವಕಾಶವಿದೆ. ಆ ರೀತಿ ನೀವು ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆಯೇ ಹೊರತು ಈಗ ನೀವು ಮಾಡುತ್ತಿರುವುದರಿಂದ ದಳ್ಳಾಳಿಗಳಿಗೆ ಇನ್ನೂ ಅನುಕೂಲ

ಮಾಡಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಈ ಬಗ್ಗೆ ನೀವು ಯೋಚನೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರೆ, ರೈತನಿಂದ ಗ್ರಾಹಕರಿಗೆ ಎಂದು ಇವರು ಹೇಳಿದ್ದಾರೆ. ರೀಟೈಲ್ ಎಂದರೆ ಎಷ್ಟು ಎನ್ನುವುದನ್ನು ಹೇಳಬೇಕು. ಈಗ ನಾನು ಒಂದು ಲೋಡ್ ತರಕಾರಿ ತರುತ್ತೇನೆ. ಆ ಒಂದು ಲೋಡ್‌ಅನ್ನು ಇನ್ನೊಬ್ಬರು ಪರ್ಚೇಸ್ ಮಾಡುತ್ತಾರೆ. ಅದರಿಂದ ಎ.ಪಿ.ಎಂ.ಸಿ.ಗೆ ಬರಬೇಕಾದ ಆದಾಯದಲ್ಲಿ ಖೋತಾ ಆಗುತ್ತದೆಯೇ ಹೊರತು ಗ್ರಾಹಕರಿಗೆ ಅನುಕೂಲವಾಗುವುದಿಲ್ಲ, ಉತ್ಪಾದಕರಿಗೆ ಅನುಕೂಲವಾಗುವುದಿಲ್ಲ. ರೀಟೈಲ್ ಲಿಮಿಟ್ ಎಷ್ಟು ಎನ್ನುವುದನ್ನು ನೀವು ಹಾಕಬೇಕು. 2 ಕೆ.ಜಿ.ಯನ್ನೋ, 5 ಕೆ.ಜಿ.ಯನ್ನೋ, 10 ಕೆ.ಜಿ.ಯನ್ನೋ ರೀಟೈಲ್ ಎಂದು ಹಾಕಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ, ಈಗ ನೀವು value base ಮೇಲೆ ಹಾಕುತ್ತಿರುವ ತೆರಿಗೆ ವರ್ತಕರಿಗೆ ಉಳಿಯುತ್ತದೆಯೋ ಹೊರತು, ದಳ್ಳಾಳಿಗಳಿಗೆ ಉಳಿಯುತ್ತದೆಯೋ ಹೊರತು, ಅದು ಬಿಟ್ಟರೆ ಇನ್ಯಾವುದೇ ರೀತಿಯಲ್ಲಿ ರೈತನಿಗೂ ಲಾಭವಾಗುವುದಿಲ್ಲ, ಗ್ರಾಹಕರಿಗೆ ತಲುಪುವುದೇ ಇಲ್ಲ. ಅದನ್ನು ತಪ್ಪಿಸುವುದಕ್ಕೆ ನೀವು ಏನು ಮಾಡುತ್ತೀರಿ ಎನ್ನುವುದನ್ನು ಹೇಳಲೇ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸಂಸ್ಕರಣೆ ಎಂದರೇನು? ಸಂಸ್ಕರಣೆ ಮಾಡುವುದಕ್ಕೆ ನೀವು ಯಾವ ರೀತಿ ಅವಕಾಶ ಮಾಡಿಕೊಟ್ಟಿದ್ದೀರಿ? ಸಂಸ್ಕರಣೆಗೆ ನೀವು ಸ್ಥಳ ಕೊಡಬೇಕಾಗಿತ್ತು. ಸಂಸ್ಕರಣೆ ಮಾಡುವುದು ಎಂದರೆ ಅದು ಒಂದು ದಿನಕ್ಕೆ ಮುಗಿಯುವುದಲ್ಲ, ಅದು ಮಾರಾಟ ಮಾಡಿ ಹೋದ ಹಾಗಲ್ಲ. ಆ ಸ್ಥಳವನ್ನು ಇನ್ನಾರಿಗೋ ಹಸ್ತಾಂತರಿಸುವುದಕ್ಕೆ ಇದನ್ನು ತಂದಿದ್ದದೀರಿ ಎನ್ನುವ ಅನುಮಾನ ಬರುವ ಸ್ಥಿತಿ ಇದೆ. ಸಂಸ್ಕರಣೆ ಮಾಡುವುದು ಎಂದರೆ ಆ ಜಾಗವನ್ನು ಲೀಸ್‌ಗೆ ಕೊಡಬೇಕಾಗುತ್ತದೆ ಅಥವಾ ರೆಂಟ್‌ಗೆ ಕೊಡಬೇಕಾಗುತ್ತದೆ ಅಥವಾ ಇನ್ನೇನ್ನೋ ಮಾಡಬೇಕಾಗುತ್ತದೆ. ಸಂಸ್ಕರಣೆ ವಿಷಯದಲ್ಲಿ ತಾವು ಸ್ಪಷ್ಟೀಕರಣ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ವಿಶ್ವನಾಥ್ (ಯಲಹಂಕ):– ಮಾನ್ಯ ಅಧ್ಯಕ್ಷರೆ, ಎ.ಪಿ.ಎಂ.ಸಿ.ಯ ಒಂದು ಸಗಟು ಮಳಿಗೆ ಉದ್ಘಾಟನೆಯಾಯಿತು. ಇವತ್ತಿನವರೆಗೂ ಅದನ್ನು ಯಾರಿಗೂ ಅಲಾಟ್‌ಮೆಂಟ್ ಮಾಡಿಲ್ಲ. ನಮಗೆ ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇಲ್ಲ, ದೂರವಾಗುತ್ತದೆ ಎಂದು ಹೇಳಿ ಯಾವ ವರ್ತಕರಾಗಲೀ, ರೈತರಾಗಲೀ ಅಲ್ಲಿಗೆ ಹೋಗುವುದಿಲ್ಲ. ಅದನ್ನು ಕಟ್ಟಿ ಎರಡು ವರ್ಷಗಳಿಂದ ಸುಮ್ಮನೆ ಇದ್ದವರು ಮೊನ್ನೆ ಏಕಾಏಕಿ ಉದ್ಘಾಟನೆ ಮಾಡಿದ್ದಾರೆ. ಅಲ್ಲಿರುವಂಥ ಅಧ್ಯಕ್ಷರು, ಕೆಲವರು ನಿರ್ದೇಶಕರು ಸೇರಿಕೊಂಡು ದುಡ್ಡಿಗೆ ವ್ಯವಹಾರ ಮಾಡುತ್ತಿದ್ದಾರೆ, ನಿಮಗೆ ಮಳಿಗೆ ಬೇಕೆಂದರೆ ಇಷ್ಟು ದುಡ್ಡು ಕೊಟ್ಟರೆ ಅಲಾಟ್‌ಮೆಂಟ್ ಮಾಡುತ್ತೇವೆ ಎಂದು ವ್ಯವಹಾರ ಮಾಡುತ್ತಿದ್ದಾರೆ. ಅಂದರೆ, ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಎ.ಪಿ.ಎಂ.ಸಿ. ಕಟ್ಟಡವನ್ನು ಕಟ್ಟಿದರೂ ಕೂಡ ಅದನ್ನು ರೈತರಿಗೂ ಕೊಡುತ್ತಿಲ್ಲ, ವರ್ತಕರಿಗೂ ಕೊಡುತ್ತಿಲ್ಲ. ಅದರ ಬಗ್ಗೆ ನಮ್ಮ ಕಾನೂನು ಸಚಿವರಿಗೂ ಗೊತ್ತು. ಅದಕ್ಕೆ ಮೂಲಭೂತ ಸೌಕರ್ಯಗಳನ್ನು ಇನ್ನೂ ಸರಿಯಾಗಿ ಕೊಟ್ಟಿಲ್ಲ. ದಯವಿಟ್ಟು ಅದು ದುರುಪಯೋಗವಾಗದ ರೀತಿಯಲ್ಲಿ ತಾವು ನೋಡಿಕೊಳ್ಳಬೇಕು.

ಶ್ರೀ ಬಿ.ಆರ್. ಯಾವಗಲ್ (ನರಗುಂದ):– ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಒಂದು ಅಮೆಂಡ್‌ಮೆಂಟ್ ತಂದಿದ್ದಾರೆ. ನಿಯಮಾವಳಿಗಳನ್ನು ರೂಪಿಸಬೇಕು ಎಂದು ಹೇಳುತ್ತಿದ್ದಾರೆ. ನಾವು ಆಸ್ಟ್ರೇಲಿಯಾ ದೇಶಕ್ಕೆ ಹೋದಾಗ ನೋಡಿದ್ದೆವು. ರೈತರೆಲ್ಲ ತಮ್ಮ ಮಾಲನ್ನು ಒಂದು ಕಡೆಗೆ ತೆಗೆದುಕೊಂಡು ಬಂದು ಒಂದು ಕಡೆ ಇಟ್ಟು ಅಲ್ಲಿ ಗ್ರಾಹಕರು ಬಂದು ಅದನ್ನು ತೆಗೆದುಕೊಂಡು ಹೋಗುವ ವ್ಯವಸ್ಥೆ ಅಲ್ಲಿಯೂ ಇದೆ. ಇದನ್ನು ರೆಗ್ಯುಲೇಟ್ ಮಾಡಲಿಕ್ಕೆ ಮತ್ತು ಅದಕ್ಕೆ ಒಂದು ರೂಪ ಕೊಡಲಿಕ್ಕೆ ವೈಜ್ಞಾನಿಕವಾಗಿ ಏನು ಮಾಡಬಹುದು ಎಂದು ಯೋಚನೆ ಮಾಡಬೇಕು. ಇವತ್ತು ಎಲ್ಲ ಹಂತಗಳಲ್ಲಿಯೂ ರೈತನ ಶೋಷಣೆಯಾಗುತ್ತದೆ. ಮಾರುಕಟ್ಟೆಗೆ ಹೋದರೂ ಅವರು ದಳ್ಳಾಳಿಗಳ ಜೊತೆ ಕುಳಿತು ಮಾರಾಟ ಮಾಡಬೇಕು. ಅಲ್ಲಿಯೂ ಅವರಿಗೆ ಶೋಷಣೆಯಾಗುತ್ತದೆ, ಅನಾನುಕೂಲವಾಗುತ್ತದೆ. ಅವರು

ಮುನಿಸಿಪಾಲಿಟಿಯವರಿಗೋ, ಇನ್ಯಾರಿಗೋ ದುಡ್ಡು ಕೊಟ್ಟು ಅಲ್ಲಿ ಕೂರಬೇಕಾಗುತ್ತದೆ. ಅದಕ್ಕಾಗಿ ಒಂದು ಒಳ್ಳೆಯ ಜಾಗವನ್ನು ಕಂಡುಹಿಡಿದು, ಅದನ್ನು ಅಭಿವೃದ್ಧಿ ಪಡಿಸಿ, ಮಾರಾಟ ಮಾಡಲು ಬೇಕಾದಂಥ back up support ಮಾಡುವುದು ಒಳ್ಳೆಯದಿದೆ. ಅದನ್ನು ದಯವಿಟ್ಟು ಮಾಡಬೇಕು.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ):– ಮಾನ್ಯ ಅಧ್ಯಕ್ಷರೆ, ಮಾರುಕಟ್ಟೆ ಆಗಬೇಕು ಎಂದು ರಾಜ್ಯದಲ್ಲಿ ಬಹಳ ಬೇಡಿಕೆ ಇದೆ. ಇದರಿಂದ ವಿಶೇಷವಾಗಿ ರೈತರಿಗೆ ಅನುಕೂಲವಾಗುತ್ತದೆ. ಇದು ನಾವು ಕಮಿಟ್‌ಮೆಂಟ್ ಮಾಡಿರುವಂಥದ್ದು. ಗ್ರಾಮೀಣ ಎಕಾನಮಿ ಇಂಪ್ರೂವ್ ಆಗಬೇಕಾದರೆ ರೈತ ಸಮುದಾಯಕ್ಕೆ ಬೇಕಾಗಿರುವ ಮಾರುಕಟ್ಟೆಯನ್ನು ಎಕ್ಸ್‌ಪ್ಯಾಂಡ್ ಮಾಡಲೇಬೇಕಾಗಿತ್ತು. Market is a fixed place where buyers and sellers meet and interest of both will be protected. ಅದರ ಬಗ್ಗೆ ಅನುಮಾನವೇನು? ಅಲ್ಲಿರುವ ಕಮಿಟಿಯವರು ಯಾವ ರೀತಿ ಪ್ರೊಟೆಕ್ಟ್ ಮಾಡಬೇಕೆಂದು ಎಲ್ಲ ಗೈಡ್‌ಲೈನ್‌ಗಳನ್ನು ಮಾಡುತ್ತಾರೆ. ರೈತರ ಹಿತದೃಷ್ಟಿಯಿಂದ, ಗ್ರಾಮೀಣ ಎಕಾನಮಿ ಇಂಪ್ರೂವ್‌ಮೆಂಟ್ ದೃಷ್ಟಿಯಿಂದ ಇನ್ನೂ ಹೆಚ್ಚಿನ ವೇಗದಲ್ಲಿ ಮಾರುಕಟ್ಟೆ ಎಕ್ಸ್‌ಪ್ಯಾಂಡ್ ಆಗಬೇಕು ಎಂದು ಹೇಳುವ ಮೂಲಕ ಈ ವಿಧೇಯಕವನ್ನು ಪಾಸ್ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ದು ಬಿ. ನ್ಯಾಮಗೌಡ (ಜಮಖಂಡಿ):– ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ನಮ್ಮ ಜಮಖಂಡಿಯ ಎ.ಪಿ.ಎಂ.ಸಿ.ಯಲ್ಲಿ ಮೊದಲು ಕಾಯಿಪಲ್ಯೆ ಮಾರಾಟ ಮಾಡುವುದು ಇರಲಿಲ್ಲ. ಈಗ 2–3 ವರ್ಷಗಳಿಂದ ಅದನ್ನು ಡೆವಲಪ್ ಮಾಡಿದ್ದಾರೆ, ಬಹಳ ಚೆನ್ನಾಗಿ ಆಗಿದೆ. ರೈತರು, ಹೆಣ್ಣುಮಕ್ಕಳೆಲ್ಲ ಬೆಳಗ್ಗೆ ಕಾಯಿಪಲ್ಯೆ ತೆಗೆದುಕೊಂಡು ಬಂದು ಅದನ್ನು ಮಾರಿ ಮಧ್ಯಾಹ್ನಕ್ಕೆ ವಾಪಸ್ಸು ಹೋಗುತ್ತಿದ್ದಾರೆ. ಇದು ಬಹಳ ಒಳ್ಳೆಯ ವ್ಯವಸ್ಥೆಯಾಗಿದೆ. ಇದನ್ನು ಮುಂದುವರೆಸಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಇದರಿಂದ ರೈತರಿಗೆ ಅನಾನುಕೂಲವೇ ಹೆಚ್ಚು. ಆದ್ದರಿಂದ ಇದನ್ನು ಮೊದಲು ಒಂದು ಜಿಲ್ಲೆಯಲ್ಲಿ ಪೈಲಟ್ ಪ್ರಾಜೆಕ್ಟ್ ಎಂದು ಮಾಡಿ. ಅಲ್ಲಿ ಸರಿ ಹೋದರೆ ಬೇರೆ ಕಡೆ ಮುಂದುವರೆಸಿ. ಇಲ್ಲದಿದ್ದರೆ ಅದರಿಂದ ರೈತರಿಗೆ ತೊಂದರೆಯೇ ಜಾಸ್ತಿ.

ಶ್ರೀ ಹೆಚ್.ಡಿ. ರೇವಣ್ಣ:– ಜಯಚಂದ್ರರವರೇ, ಎನ್.ಡಿ.ಡಿ.ಬಿ.ಯಲ್ಲಿ ಮಾಡಿದ್ದಾರೆ. ಸಫಲ್ ಮಾರುಕಟ್ಟೆಯಲ್ಲೂ ಮಾಡಿದ್ದಾರೆ. ನೀವೂ ಆ ರೀತಿ ಮಾಡಿದರೆ ಒಳ್ಳೆಯದು.

ಶ್ರೀ ಟಿ.ಬಿ. ಜಯಚಂದ್ರ:– ನಾನು ಸಫಲ್ ಮಾರುಕಟ್ಟೆಯನ್ನೂ ನೋಡಿದ್ದೇನೆ. ನೀವು ಸಫಲ್ ಮಾರುಕಟ್ಟೆಗೂ, ಇದಕ್ಕೂ ಹೋಲಿಸಬೇಡಿ. ಇದು ರೀಟೈಲ್ ಮಾರುಕಟ್ಟೆ. ಗ್ರಾಹಕರು ರೀಟೈಲ್ ಆಗಿ ಕೊಳ್ಳಲು ಎ.ಪಿ.ಎಂ.ಸಿ. ಒಳಗೆ ಹೋಗಲು ಅವಕಾಶವಿರಲಿಲ್ಲ. ಈಗ ಅದಕ್ಕೆ ಅವಕಾಶವನ್ನು ಕಲ್ಪಿಸುತ್ತಿದ್ದೇವೆ. ಅದನ್ನು ಪ್ರಮೋಟ್ ಮಾಡುವುದು, ಎನ್‌ಕರೇಜ್ ಮಾಡುವುದು ಮಾರುಕಟ್ಟೆ ಸಮಿತಿಗಳ ವ್ಯಾಪ್ತಿಗೆ ಬರುತ್ತದೆ. ನಿಯಮಗಳನ್ನು ಮಾಡುವಾಗ ನಿಯಮಗಳಲ್ಲಿ ಇವುಗಳೆಲ್ಲವುಗಳಿಗೂ ಅವಕಾಶವನ್ನು ಮಾಡುತ್ತೇವೆ. ರೈತನಿಗೆ ಶೋಷಣೆಯಾಗಬಾರದು, ಅವನಿಗೆ ಕಾರ್ಡ್ ಕೊಡುವಂಥದ್ದು, ನೇರವಾಗಿ ಅವನೇ ಮಾರಾಟ ಮಾಡುವಂಥದ್ದನ್ನು ಮಾಡುತ್ತೇವೆ. ದಯಮಾಡಿ ಅರ್ಥ ಮಾಡಿಕೊಳ್ಳಿ. ಬೆಳಗ್ಗೆ ಹೊತ್ತು ಯಶವಂತಪುರಕ್ಕೆ ಹೋಗಬೇಕಾದರೆ ನೋಡಿದರೆ ರಸ್ತೆ ಬದಿಯಲ್ಲಿ ಮಾರಾಟ ಮಾಡುತ್ತಾ ಕುಳಿತುಕೊಂಡಿರುತ್ತಾರೆ. ನೂರಾರು ಕಿ.ಮೀ.ಗಳಿಂದ ಸೊಪ್ಪನ್ನು ತೆಗೆದುಕೊಂಡು ಬಂದು, ರಾತ್ರಿಯೆಲ್ಲ ಪ್ರಯಾಣ ಮಾಡಿ ಅಲ್ಲಿಗೆ ತೆಗೆದುಕೊಂಡು ಬಂದು, ಬೆಳಗ್ಗೆ 5–6 ಗಂಟೆಯಾಗುವಷ್ಟರಲ್ಲಿ ಮಾರಿಬಿಟ್ಟು ವಾಪಸ್ಸು ಹೋಗುತ್ತಾರೆ. ಅವರಿಗೆ ಕೊಟ್ಟಷ್ಟು, ಸಿಕ್ಕಿದಷ್ಟು ಲಾಭ. ಅವರು ಒಂದು ಗಂಟೆ ಅದನ್ನು ಇಟ್ಟುಕೊಳ್ಳಲೂ ಅವರಿಗೆ ಶಕ್ತಿ ಇರುವುದಿಲ್ಲ. ಅವರು ಶೋಷಣೆಗೆ ಒಳಗಾಗುತ್ತಾರೆ. ಇದೆಲ್ಲವುದನ್ನೂ ಕಂಡು ಅವರಿಗೆ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ ಅವಕಾಶವನ್ನು ಕಲ್ಪಿಸುತ್ತಿದ್ದೇವೆ. ಅವಕಾಶ ಕಲ್ಪಿಸುತ್ತಿದ್ದೇವೆ ಎಂದ ತಕ್ಷಣ ಅವರನ್ನು ನಿಯಂತ್ರಣ ಮಾಡಿ, ಕಂಪಲ್ಸರಿಯಾಗಿ ಎ.ಪಿ.ಎಂ.ಸಿ.

ಮಾರುಕಟ್ಟೆಗೆ ಹಾಕುತ್ತೇವೆ ಎಂದು ಅರ್ಥವಲ್ಲ. ಅವರಿಗೆ ಅವಕಾಶವನ್ನು ಕಲ್ಪಿಸುತ್ತಿದ್ದೇವೆ. ಮಾರುಕಟ್ಟೆ ಬೆಳೆಯಲು ಅವಕಾಶವಾಗಲಿ ಎನ್ನುವ ಕಾರಣಕ್ಕೋಸ್ಕರ ಇದನ್ನು ತಂದಿದ್ದೇವೆ.

ಅಧ್ಯಕ್ಷರು:– ಮಾನ್ಯ ಸದಸ್ಯರುಗಳು ಏನು ಸಂಶಯಗಳನ್ನು ಇಟ್ಟುಕೊಂಡಿದ್ದಾರೆ, ಅದನ್ನು ದೂರ ಮಾಡುವುದಕ್ಕೆ ನಿಮ್ಮ ನಿಯಮಗಳಲ್ಲಿ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:– ನಿಯಮಗಳಲ್ಲಿ ಅವಕಾಶ ಮಾಡುತ್ತೇವೆ. ಪ್ರತಿಯೊಬ್ಬರ ಸಲಹೆಯನ್ನೂ ನಾನು ಒಪ್ಪುತ್ತೇನೆ. ಅದನ್ನು ನಿಯಮಗಳಲ್ಲಿ ತರುತ್ತೇನೆ. ನಿಯಮಗಳ ಕಾಪಿಯನ್ನು ನಿಮಗೆಲ್ಲರಿಗೂ ಕಳುಹಿಸಿ ಕೊಡುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒಂದು ಸಣ್ಣ ತಿದ್ದುಪಡಿಯನ್ನು ತಂದಿದ್ದು, ಅದನ್ನು ನಾವು ಹೂ ಎಂದರೂ ಮಾಡುತ್ತೀರಿ, ಉಹೂ ಎಂದರೂ ಮಾಡೇಮಾಡುತ್ತೀರಿ. ಅದರ ಬಗ್ಗೆ ನಾನು ಹೆಚ್ಚು ತಂಟೆ ಮಾಡಲು ಹೋಗುವುದಿಲ್ಲ. ಈಗ ಇಲ್ಲಿ ಸಂಬಂಧಪಟ್ಟ ಸಚಿವರಿಲ್ಲ, ಅವರು ಆ ಮನೆಯಲ್ಲಿದ್ದಾರೋ, ಅಥವಾ ಅವರಿಗೆ ಬೇರೆ ಕೆಲಸದ ಒತ್ತಡವಿದೆಯೋ, ಇದನ್ನು ನಿಮಗೆ ಹ್ಯಾಂಡ್ ಓವರ್ ಮಾಡಿದ್ದಾರೆ. ಅದನ್ನು ನೀವು ಮಾಡುತ್ತಿದ್ದೀರಿ, ಒಪ್ಪೋಣ. ನೀವು ಮಾಡುತ್ತಿದ್ದೀರಿ ಅದನ್ನು ಒಪ್ಪೋಣ. RKVY ನಲ್ಲಿ ಗ್ರಾಮೀಣ ಭಂಡಾರ ಎಂದು ಏನು ಗ್ರಾಮೀಣ ಪ್ರದೇಶದಲ್ಲಿ ಕಟ್ಟಿದ್ದೀರಿ, ಅವೆಲ್ಲದರ ನಿರ್ವಹಣೆಯನ್ನು ಪಂಚಾಯಿತಿಗಳು ಮಾಡುತ್ತಿವೆ. ಆ ಪಂಚಾಯಿತಿಗಳು ನಿರ್ವಹಣೆ ಮಾಡುವುದರಲ್ಲಿ ಬಹಳಷ್ಟು ತೊಂದರೆಯಾಗುತ್ತಿದೆ. ಸರಿಯಾಗಿ ನಿರ್ವಹಣೆ ಆಗುತ್ತಿಲ್ಲ, ರೈತರಿಂದ ಬಂದಿರುವ ಮಾಲನ್ನು ಅಲ್ಲಿ ಇಡುತ್ತಿಲ್ಲ, ಅದಕ್ಕೆ ಜವಾಬ್ದಾರಿ ಬರುವುದಿಲ್ಲ. ಹಾಗಾಗಿ, ಜವಾಬ್ದಾರಿ ಬರಬೇಕಾದರೆ ಆ ಗ್ರಾಮದಲ್ಲಿ ಇರುವ ಕೃಷಿ ಪತ್ತಿನ ಸಹಕಾರ ಸಂಘಗಳು ಏನಿರುತ್ತವೆ ಅವುಗಳಿಗೆ hand over ಮಾಡಿ. ಅಲ್ಲೊಂದು ಆಡಳಿತ ಮಂಡಳಿ ಇರುತ್ತದೆ, ಕಾರ್ಯದರ್ಶಿಗಳು ಇರುತ್ತಾರೆ, ಕಾರ್ಯದರ್ಶಿಗಳಿಗೆ ಜವಾಬ್ದಾರಿ ಇರುತ್ತದೆ,

ಅವರಿಗೆ ಹೆಚ್ಚಿನ ಕೆಲಸ ಮಾಡಲಿಕ್ಕೆ, ರೈತರಿಗೆ ಅನುಕೂಲ ಮಾಡಲಿಕ್ಕೆ ಸಹಾಯವಾಗುತ್ತದೆ. RKVY ನಲ್ಲಿ ಕಟ್ಟಿರುವ ಗ್ರಾಮೀಣ ಭಂಡಾರಗಳನ್ನು ಏನು ಕಟ್ಟಿದ್ದೀರಿ, ಆಯಾ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ನೀವು hand over ಮಾಡಿ ನಿರ್ವಹಣೆ ಮಾಡಲಿಕ್ಕೆ ಹೊರಟರೆ ಅದು ಇನ್ನಷ್ಟು ಹೆಚ್ಚು ರೈತರಿಗೆ ಅನುಕೂಲವಾಗುತ್ತದೆ. ಆ ಕೆಲಸ ಮಾಡಿ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಇಲಾಖೆ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಸಲಹೆಯನ್ನು ನಾನು ಒಪ್ಪುತ್ತೇನೆ. ಇದರ ಉದ್ದೇಶ ಏನೆಂದರೆ, ಮುಂಚೆ ಹೆಚ್ಚು ಮಾರುಕಟ್ಟೆ ಬೆಳೆಯಲಿ, ರೈತರಿಗೆ ವರದಾನವಾಗಲಿ, ಗ್ರಾಹಕನಿಗೂ ಸಹಾಯವಾಗಲಿ, elimination of middlemen, that is the concept. ಅದನ್ನು ಮಾಡಬೇಕಾದಾಗ ಒಂದು ಸಲ ನೀವು ಅವಕಾಶ ಮಾಡಿದರೆ ಪ್ರಯೋಗ ಎಷ್ಟರಮಟ್ಟಿಗೆ ಆಗುತ್ತದೆ ಎನ್ನುವುದನ್ನು ನೋಡೋಣ. ಅದನ್ನು ಮಾಡುವುದಕ್ಕೆ ಸಾಧ್ಯತೆ ಇದೆ. ಅತ್ಯಂತ ಯಶಸ್ವಿಯಾಗಿರುವುದನ್ನು ತಮಿಳುನಾಡಿನಲ್ಲಿ ಪ್ರತಿ ತಾಲ್ಲೂಕಿನಲ್ಲೂ ಕೂಡ ಮಾಡಿದ್ದಾರೆ. ಆ ರೀತಿಯಾಗಿ ಇದು ಬರುವುದಕ್ಕೆ ಸಾಧ್ಯತೆ ಇದೆ. ಅವರು ಪ್ರಯತ್ನಪಟ್ಟು ಮಾಡಿರುವುದು. ನಾನೇ ಅಲ್ಲಿಗೆ ಹೋಗಿ ಕಣ್ಣಾರೆ ನೋಡಿಕೊಂಡು ಬಂದಿದ್ದೇನೆ. ಕಳೆದ 10–15 ವರ್ಷಗಳಲ್ಲಿ ಅಷ್ಟೊಂದು ಪರಿಣಾಮಕಾರಿಯಾದ ಬದಲಾವಣೆಯನ್ನು ತಂದಿದ್ದಾರೆ. ಅಲ್ಲಿ middlemen ಪ್ರಶ್ನೆಯೇ ಇಲ್ಲ. ಮಾನ್ಯ ಸದಸ್ಯರುಗಳು ಕೆಲವು ಸಲಹೆ ಕೊಟ್ಟ ರೀತಿಯಲ್ಲಿ ನಾನು ನನ್ನ ಕ್ಷೇತ್ರವಾದ ಸಿರಾದಲ್ಲಿ ಮಾನ್ಯ ಕಾರಜೋಳರವರು ಹೇಳಿದ ರೀತಿಯಲ್ಲಿ ಒಂದು ಸಣ್ಣ ತರಕಾರಿ ಮಾರುಕಟ್ಟೆಯನ್ನು ಕಟ್ಟಿಸಿದ್ದೇನೆ. ಬಹುಶಃ ಅದರಿಂದ ರೈತರಿಗೆ ಹೆಚ್ಚು ಲಾಭವಾಗಿದೆ. ರೈತರು, ಬೆಳೆಯತಕ್ಕಂಥವರಿಗೆ ಹೆಚ್ಚು demand and supply ಎನ್ನುವುದು ಏನು ಇರುತ್ತದೋ ಅವನಿಗೆ ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ನಾನು ಬೆಳೆದಿರುವ ಬೆಳೆಗೆ ಎಷ್ಟು ಬೇಡಿಕೆ ಇದೆ ಎನ್ನುವುದು ಅವನಿಗೆ ಗೊತ್ತಾಗುತ್ತದೆ. ಗ್ರಾಹಕ

ಯಾವುದನ್ನು ಬಯಸುತ್ತಾನೆ ಅದನ್ನು ಬೆಳೆಯುವುಕ್ಕೆ ಅವಕಾಶವಾಗುತ್ತದೆ. ಆ demand and supply ಅನ್ನು balance ಮಾಡುವುದಕ್ಕೋಸ್ಕರ these markets are necessary. ಆ ಕಾರಣಕ್ಕೋಸ್ಕರ ಇದನ್ನು ತಂದಿದ್ದೇನೆ. ಈ ಮಸೂದೆ ಬಗ್ಗೆ ಬಹಳಷ್ಟು ಸದಸ್ಯರು ತಮ್ಮ ಧ್ವನಿಗೂಡಿಸಿದ್ದೀರಿ. ಅದರ ಬಗ್ಗೆ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದೀರಿ ಮತ್ತು ಎಚ್ಚರಿಕೆ ಏನಿರಬೇಕು ಎನ್ನುವುದನ್ನು ಕೊಟ್ಟಿದ್ದೀರಿ. ಇದರ ಮುಖೇನ ಸರ್ಕಾರ ಎಲ್ಲವನ್ನೂ ಮುಕ್ತವಾಗಿ ಪರಿಶೀಲನೆ ಮಾಡುತ್ತದೆ. ಮುಂದೆ ಇಂತಹ ಮಾರ್ಕೆಟ್‌ಗಳು ಆಗಬೇಕು. ಇದು RKVY ನಲ್ಲೂ ಸಹ ಸಾಕಷ್ಟು ಸಹಾಯ ಕೊಡುತ್ತದೆ. ತರಕಾರಿ ಮಾರುಕಟ್ಟೆಗೆಂದೇ ಇಂತಿಷ್ಟು ಎಂದು ಜಾಗವನ್ನು ಕೊಡುವುದಕ್ಕೆ ಇವತ್ತು ಅಂಥ ಆಡಳಿತ ಪ್ರಾರಂಭವಾದರೆ ಹಣ ಕೊಡುವುದಕ್ಕೆ ಬೇಕಾದಷ್ಟು ಇದೆ. ಹಾಗಾಗಿ ಈ ರೀತಿಯ ತರಕಾರಿ ಮಾರುಕಟ್ಟೆಗಳು ಜಾಸ್ತಿ ಬರುವುದರಿಂದ ರೈತರಿಗೆ ಸಹಾಯವಾಗುತ್ತದೆ, ಶೋಷಣೆ ಆಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆನ್ನುವ ಕಾರಣಕ್ಕೋಸ್ಕರ ಇದನ್ನು ಪ್ರಾಯೋಗಿಕವಾಗಿ ತಂದಿದ್ದೇವೆ. ಈ ಅವಕಾಶವನ್ನು ನಾವು ಮಾಡಿದರೆ ಮಾರುಕಟ್ಟೆ ಬೆಳೆಯುತ್ತದೆ, ಇದರಿಂದ ಶೈತರಿಗೂ ಸಹಾಯವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ತಂದಿದ್ದೇವೆ. ಇದಕ್ಕೆ ತಾವೆಲ್ಲರೂ ಧ್ವನಿಗೂಡಿಸಿದ್ದೀರಿ. ಎಲ್ಲರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ನಾವು ನಿಯಮ ತರುತ್ತೇವೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ):– ತಾವು ಹೇಳಿದ ಹಾಗೆ ದಳ್ಳಾಳಿಗಳ ಕಾಟ ತಪ್ಪಿಸಬೇಕು, ಯಾವುದೇ ತೊಂದರೆ ಆಗಬಾರದು ಎಂದು ಒಳ್ಳೆಯ ಉದ್ದೇಶದಿಂದ ಈ ಬಿಲ್ ತಂದಿದ್ದೀರಿ. ಈ ಸದನದಲ್ಲಿ ಮಾನ್ಯ ಖಮರುಲ್ ಇಸ್ಲಾಂ ಸಾಹೇಬರು ಕುಳಿತಿದ್ದಾರೆ. ಅವರ ಕ್ಷೇತ್ರದಲ್ಲಿ ರೈತರೇ ವ್ಯಾಪಾರಿಗಳಿಂದ ಬೇಸತ್ತು ಸ್ವಂತ ಅವರೇ ಮಾರಾಟ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಎಷ್ಟು ಅದ್ಭುತವಾಗಿ ಬೆಳೆದಿದೆ ಎಂದರೆ ಅದಕ್ಕೆ ಎಂ.ಎಸ್.ಕೆ. ಮಿಲ್ ಹತ್ತಿರ ರಾತ್ರಿ ಎರಡು ಗಂಟೆಯಿಂದ ಮಾರಾಟ ಪ್ರಾರಂಭವಾದರೆ ಬೆಳಗ್ಗೆ 10–00 ಗಂಟೆಗೆಲ್ಲ close ಆಗುತ್ತದೆ. ಆದರೆ, ಇವತ್ತು infrastructure ಇಲ್ಲ. ಮೊನ್ನೆ ಮಾನ್ಯ ನಿಂಗಯ್ಯನವರು ಮಾತನಾಡುತ್ತಾ, perishable goods

ಬಗ್ಗೆ ಹೇಳಿದರು, ಇವತ್ತು ಮಾರಾಟ ಮಾಡದಿದ್ದರೆ next day ಅವರು ಮಾರಾಟ ಮಾಡಿಕೊಳ್ಳಬಹುದೆಂದು ತಾವು ಹೇಳಿದಿರಿ. Perishable goods ಇಡುವುದಕ್ಕೆ ತಾವೇನಾದರೂ cold storage ಪ್ರಾರಂಭ ಮಾಡುತ್ತಿದ್ದೀರಾ? Concept develop ಮಾಡಿ ಅವರಿಗೆ ಎಲ್ಲಾ ವ್ಯವಸ್ಥೆ ಮಾಡಿಕೊಡದಿದ್ದರೆ ಮತ್ತೆ ಅವರು ಶೋಷಣೆಗೆ ಒಳಗಾಗುತ್ತಾರೆ. ಆ ತರಹ ಏನಾದರೂ ತಾವು plan ಮಾಡಿದ್ದೀರಾ?

ಅಧ್ಯಕ್ಷರು:– ಆಗಲೇ ಎಲ್ಲ ಹೇಳಿದ್ದಾರೆ. ಉತ್ತರ ಹೇಳಿ ಚರ್ಚೆ ಸಾಕು.

ಶ್ರೀ ಬಿ.ಬಿ. ನಿಂಗಯ್ಯ:– Cold storage ಬಗ್ಗೆ ಸರ್ಕಾರ ಒಂದು ಸರಿಯಾದ ತೀರ್ಮಾನಕ್ಕೆ ಬರಬೇಕು. ರೈತ ತಂದ ಹಣ್ಣು ತರಕಾರಿಗಳನ್ನು ಅವನು ಪುನಃ ವಾಪಸ್ಸು ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಸಂತೆಯಲ್ಲಿ ಕೇಳಿದ rate ಗೆ ಕೊಡಬೇಕಾದ ಪರಿಸ್ಥಿತಿಗೆ ಬಂದುಬಿಡುತ್ತಾನೆ. ಆ ದೃಷ್ಟಿಯಿಂದ cold storage ಆಗಬೇಕು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಇಲ್ಲಿ ನಮಗೆ ಹಣದ ಕೊರತೆ ಇಲ್ಲ. ಕೇಂದ್ರ ಸರ್ಕಾರ ಯಥೇಚ್ಛವಾಗಿ ಹಣ ಕೊಡುತ್ತಿದೆ.

ಅಧ್ಯಕ್ಷರು:– ಅವರ ಸಂಶಯಗಳೇನಿವೆ ಅದಕ್ಕೆ ಉತ್ತರ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ:– ಸಂಶಯಗಳೆಲ್ಲವನ್ನೂ ಕೂಡ ಗಮನದಲ್ಲಿಟ್ಟುಕೊಂಡು ನಾವು ನಿಯಮಾವಳಿಯಲ್ಲಿ ಅವಕಾಶವನ್ನು ಮಾಡಿಕೊಡುತ್ತೇವೆ. ದಯಮಾಡಿ ಈ ಮಸೂದೆಯನ್ನು pass ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:– ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014 ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ ಮತ್ತು ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ–2

ಅಧ್ಯಕ್ಷರು:– 2ನೇ ಖಂಡವು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು"ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(2ನೇ ಖಂಡವನ್ನು ವಿಧೇಯಕ್ಕೆ ಸೇರಿಸಲಾಯಿತು)

ಖಂಡ– 1ಇತ್ಯಾದಿ

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು"ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅಂಗೀಕರಿಸಲ್ಪಟ್ಟಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಸಚಿವರು):–ಮಾನ್ಯ ಅಧ್ಯಕ್ಷರೆ, 2014 ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ ಮತ್ತು ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

2014 ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಮತ್ತು ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸುವುದು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು"ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು)

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆ ಇದೆ. ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು:– ಬಜೆಟ್ ಮೇಲಿನ ಚರ್ಚೆಯನ್ನು ಇವತ್ತು ಪೂರೈಸಿಕೊಳ್ಳೋಣ. ನಾಳೆ ಉತ್ತರ ಕೊಟ್ಟಾದ ಮೇಲೆ ನಮಗೆ ಸಮಯವಿರುತ್ತದೆ. ಇವತ್ತಿನ question ಅನ್ನು ನಾಳೆ ಬರುವ question ಎಲ್ಲವನ್ನೂ ಅಜೆಂಡಾದಲ್ಲಿ ಹಾಕಿಕೊಳ್ಳೋಣ.

ಶ್ರೀ ಸಿ.ಟಿ. ರವಿ:– ಚುನಾವಣೆಯ ನಂತರವೇ ಮತ್ತೆ ನಾವು ಇಲ್ಲಿ ಭೇಟಿ ಮಾಡುವುದು.

ಅಧ್ಯಕ್ಷರು:– ಹಾಗಲ್ಲ.

ಶ್ರೀ ಡಿ.ಎನ್. ಜೀವರಾಜ್:– ಗಮನ ಸೆಳೆಯುವ ಸೂಚನೆಗಳಿವೆ, ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು:– ಖಂಡಿತ ಅವಕಾಶ ಕೊಡುತ್ತೇನೆ. ಈಗ ನಿಂಗಯ್ಯನವರೆ, ಬಜೆಟ್ ಮೇಲೆ ಮಾತನಾಡಿ, ಸಂಕ್ಷಿಪ್ತವಾಗಿ 10 ನಿಮಿಷಗಳಲ್ಲಿ ಮುಗಿಸಿ